**ಕರ್ನಾಟಕ ಸರ್ಕಾರ**

# ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-01

ಸಂಖ್ಯೆ: ಎಡಿಎಂ2(4) ವಾ.ಕ್ರಿ.ಯೋ. 23-24 ಅನುಷ್ಠಾನ 01/2022-23 ದಿನಾಂಕ: 30-03-2023

## ಸುತ್ತೋಲೆ

**ವಿಷಯ**:- ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಪೌಢ ಶಾಲೆಗಳಿಗೆ 2023-24ನೇ ಸಾಲಿನ ವಾರ್ಷಿಕ ಶೈಕ್ಷಣಿಕ ಮಾರ್ಗಸೂಚಿಯ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ: 1.**ಸಾರ್ವಜನಿಕ ಶಿಕ್ಷಣ ಇಲಾಖೆ ಆಯಕ್ತರ ಕಛೇರಿ ಬೆಂಗಳೂರು ರವರ ಪತ್ರ ಸಂಖ್ಯೆ ಎಡಿಎಂ 2(4) ವಾ.ಕ್ರಿ.ಯೋ. 23-24 ಅನುಷ್ಠಾನ 01/2022-23 ದಿನಾಂಕ:20.03.2023

2.ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ ಸಿ4(6) ಶೈ.ವ.ಪ್ರಾ01/2022-23 ದಿನಾಂಕ:20.04.2022

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗುತ್ತಿದ್ದು, ರಾಜ್ಯಾದ್ಯಂತ ಏಕರೂಪದ ಯಶಸ್ವಿ ಅನುಷ್ಠಾನಕ್ಕಾಗಿ ವಾರ್ಷಿಕ ಶೈಕ್ಷಣಿಕ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ವಾರ್ಷಿಕ/ಮಾಹೆವಾರು ಪಾಠ ಹಂಚಿಕೆ, ಪಠ್ಯೇತರ ಚಟುವಟಿಕೆಗಳು ಪರೀಕ್ಷೆ ಮತ್ತು ಮೌಲ್ಯಾಂಕನ ವಿಶ್ಲೇಷಣೆ, ಗುಣಮಟ್ಟದ ಶಿಕ್ಷಣಕ್ಕಾಗಿ ಫಲಿತಾಂಶಮುಖಿ ಚಟುವಟಿಕೆಗಳ ನಿರ್ವಹಣೆ ಹಾಗೂ ವಿವಿಧ ಶಾಲಾ ಹಂತದ CCE ಚಟುವಟಿಕೆಗಳನ್ನು ನಿರ್ವಹಿಸಲು ಸಹಾಯವಾಗುವಂತೆ ಯೋಜಿಸಿ, ಸಿದ್ಧಪಡಿಸಲಾಗಿದೆ.

ಉಲ್ಲೇಖ-2ರಂತೆ ಪ್ರಸಕ್ತ ಸಾಲಿನಲ್ಲಿ ದಿನಾಂಕ:29.05.2023ರಿಂದ ಶಾಲೆ ಪ್ರಾರಂಭಿಸಲು ಸೂಚಿಸಲಾಗಿತ್ತು. ಅದರಂತೆ ವಾರ್ಷಿಕ ಶೈಕ್ಷಣಿಕ ಕ್ರಿಯಾ ಯೋಜನೆಯ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ. ಪ್ರಯುಕ್ತ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪೌಢಶಾಲೆಗಳಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಏಕರೂಪದ ಶೈಕ್ಷಣಿಕ ಚಟುವಟಿಕೆಗಳನ್ನು ಜಾರಿಗೊಳಿಸಲು ಅನುವಾಗುವಂತೆ ಶೈಕ್ಷಣಿಕ ಅವಧಿಗಳು, ರಜಾ ದಿನಗಳು, ಮತ್ತು ವಾರ್ಷಿಕ ಕಾರ್ಯಸೂಚಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದ್ದು, ರಾಜ್ಯ ಪಠ್ಯಕ್ರಮದ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಮತ್ತು ಅನುಪಾಲನೆ ಮಾಡಲು ತಿಳಿಸಿದೆ.

### ಶಾಲಾ ಕರ್ತವ್ಯದ ದಿನಗಳು

| | |
|---|---|
| ಮೊದಲನೇ ಅವಧಿ | ದಿನಾಂಕ;29.05.2023 ರಿಂದ ದಿನಾಂಕ:07.10.2023ರ ವರೆಗೆ |
| ಎರಡನೇ ಅವಧಿ | ದಿನಾಂಕ:25.10.2023 ರಿಂದ ದಿನಾಂಕ:10.04.2024ರ ವರಗೆ |

### ರಜಾ ದಿನಗಳು

| | |
|---|---|
| ದಸರಾ ರಜೆ | ದಿನಾಂಕ:08.10.2023ರಿಂದ ದಿನಾಂಕ:24.10.2023ರ ವರೆಗೆ |
| ಬೇಸಿಗೆ ರಜೆ | ದಿನಾಂಕ:11.04.2024 ರಿಂದ ದಿನಾಂಕ:28.05.2024ರ ವರೆಗೆ |

...............2

## 2023-24ನೇ ಶೈಕ್ಷಣಿಕ ಸಾಲಿಗೆ ಶಾಲಾ ಕರ್ತವ್ಯದ ದಿನಗಳು ಮತ್ತು ರಜಾ ದಿನಗಳ ವಿವರ

| ಕ್ರ ಸಂ | ತಿಂಗಳು ಮತ್ತು ವರ್ಷ | ಲಭ್ಯವಿರುವ ತಿಂಗಳಿನ ಒಟ್ಟು ದಿನಗಳು | ಒಟ್ಟು ರಜಾ ದಿನಗಳು | ಲಭ್ಯವಿರುವ ಶಾಲಾ ಕರ್ತವ್ಯದ ದಿನಗಳು |
|---|---|---|---|---|
| 1 | ಮೇ-2023 | 31 | 28 | 03 |
| 2 | ಜೂನ್ -2023 | 30 | 5 | 25 |
| 3 | ಜುಲೈ-2023 | 31 | 6 | 25 |
| 4 | ಆಗಸ್ಟ-2023 | 31 | 5 | 26 |
| 5 | ಸೆಪ್ಟಂಬರ್-2023 | 30 | 6 | 24 |
| 6 | ಅಕ್ಟೋಬರ್-2023 | 31 | 20 | 11 |
| 7 | ನವೆಂಬರ್-2023 | 30 | 7 | 23 |
| 8 | ಡಿಸೆಂಬರ್-2023 | 31 | 6 | 25 |
| 9 | ಜನವರಿ-2024 | 31 | 7 | 24 |
| 10 | ಫೆಬ್ರುವರಿ-2024 | 28 | 5 | 23 |
| 11 | ಮಾರ್ಚ್ -2024 | 31 | 5 | 26 |
| 12 | ಏಪ್ರಿಲ್-2024 | 30 | 21 | 09 |
| | | **365** | **121** | **244** |

### ಒಟ್ಟು ಶಾಲಾ ಕರ್ತವ್ಯದ ದಿನಗಳ ನಿರ್ವಹಣಾ ವಿವರ

| | | |
|---|---|---|
| 1 | 2023–24ನೇ ಶೈಕ್ಷಣಿಕ ಸಾಲಿಗೆ ಲಭ್ಯವಾಗುವ ಒಟ್ಟು ಶಾಲಾ ಕರ್ತವ್ಯದ ದಿನಗಳು | 244 ದಿನಗಳು |
| 2 | ಪರೀಕ್ಷೆಗಳು ಮತ್ತು ಮೌಲ್ಯಾಂಕನ ಕಾರ್ಯಕ್ಕಾಗಿ (FA & SA) | 26 ದಿನಗಳು |
| 3 | ಪಠ್ಯೇತರ ಚಟುವಟಿಕೆಗಳ/ಪಠ್ಯ ಚಟುವಟಿಕೆಗಳ/ಸ್ಪರ್ದೆಗಳ ನಿರ್ವಹಣಾ ಕಾರ್ಯಕ್ಕಾಗಿ | 24 ದಿನಗಳು |
| 4 | ಮೌಲ್ಯಮಾಪನಾ ಮತ್ತು ಫಲಿತಾಂಶ ವಿಶ್ಲೇಷಣೆ ಕಾರ್ಯಕ್ಕಾಗಿ | 10 ದಿನಗಳು |
| 5 | ಶಾಲಾ ಸ್ಥಳೀಯ ರಜೆಗಳು | 4 ದಿನಗಳು |
| 6 | ಬೋಧನಾ–ಕಲಿಕಾ ಪ್ರಕ್ರಿಯೆಗೆ ಉಳಿಯುವ ಕರ್ತವ್ಯದ ದಿನಗಳು | 180ದಿನಗಳು |

**ವಿಶೇಷ ಸೂಚನೆಗಳು:**

**A. 2022-23ನೇ ಶೈಕ್ಷಣಿಕ ಸಾಲಿನ ಮುಕ್ತಾಯ ಹಂತದಲ್ಲಿ ನಿರ್ವಹಿಸಬೇಕಾದ ಅಂಶಗಳ ಕುರಿತು**

1. ಉಲ್ಲೇಖ-2 ರಂತೆ 5 ಮತ್ತು 8 ನೇ ತರಗತಿಯ SA-2 ಮೌಲ್ಯಾಂಕನ ಸೇರಿದಂತೆ ಉಳಿದ 1 ರಿಂದ 9 ನೇ ತರಗತಿಗಳ ಫಲಿತಾಂಶವನ್ನು ನಿಗದಿಪಡಿಸಿದಂತೆ ದಿನಾಂಕ:08.04.2023 ರಂದು ಪ್ರೌಢ ಶಾಲಾ ವಿಭಾಗ ಹಾಗೂ ದಿನಾಂಕ:10.04.2023 ರಂದು ಪ್ರಾಥಮಿಕ ಶಾಲಾ ಹಂತದಲ್ಲಿ(ಈ ದಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಇರುವುದರಿಂದ) ಸಮುದಾಯ ದತ್ತ ಶಾಲೆ/ಪೋಷಕರ ಸಭೆ ಕರೆದು ಪ್ರಕಟಣೆ ಮಾಡುವುದು.

.............3

2. ಶಾಲಾ ಸ್ಥಳೀಯ ರಜೆಗಳಿಗೆ ಸಂಬಂಧಿಸಿದಂತೆ ಶಾಲಾವಾರು ನಿರ್ದಿಷ್ಟಪಡಿಸಿದ ದಿನಾಂಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೂರ್ವಭಾವಿಯಾಗಿ ಜೂನ್-2023ರ ಮೊದಲನೇ ವಾರದಲ್ಲಿ ಅನುಮೋದನೆ ನೀಡುವುದು. ಅನುಮೋದಿಸಿದ ದಿನಾಂಕಗಳಿಗೆ ಮಾತ್ರ ಸ್ಥಳೀಯ ರಜೆ ನೀಡುವುದು.
3. ಉಲ್ಲೇಖ-2ರಲ್ಲಿ ನಿಗಧಿಪಡಿಸಿದಂತೆ 10.04.2023ಕ್ಕೆ ಪ್ರಸಕ್ತ ಶೈಕ್ಷಣಿಕ ಸಾಲು ಮುಕ್ತಾಯವಾಗುತ್ತಿದ್ದು, 1 ರಿಂದ 9ನೇ ತರಗತಿವರೆಗೆ ಮೌಲ್ಯಾಂಕನ ಪರೀಕ್ಷೆಗಳನ್ನು ಪೂರ್ಣಗೊಳಿಸಿದ್ದು, ಅದರ ಮೌಲ್ಯಮಾಪನವನ್ನು ಪೂರ್ಣಗೊಳಿಸಿ ಫಲಿತಾಂಶವನ್ನು ಶೇ 100 ಅಂಕಗಳಿಗೆ ಕ್ರೂಢೀಕರಿಸಿ ನಿಯಮಾನುಸಾರ ಗ್ರೇಡ್ ದಾಖಲಿಸಿ SATS ನಲ್ಲಿ ದಿನಾಂಕ:25.04.2023ರೊಳಗಾಗಿ ಇಂದೀಕರಿಸತಕ್ಕದ್ದು.
4. ದಿನಾಂಕ:14.04.2023ರಂದು ಡಾ॥ ಬಿ.ಆರ್ ಅಂಬೇಡ್ಕರ್ ರವರ ಜಯಂತಿಯನ್ನು ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಹಾಗೂ ಎಸ್.ಡಿ.ಎಂ.ಸಿ/ ಖಾಸಗಿ ಶಾಲೆಗಳಲ್ಲಿ ಸಂಬಂಧಿಸಿದ ಆಡಳಿತ ಮಂಡಳಿಯವರು ಮತ್ತು ಮಕ್ಕಳೊಂದಿಗೆ ಉತ್ತಮ ಪೂರ್ವ ತಯಾರಿಯೊಂದಿಗೆ ಕಡ್ಡಾಯವಾಗಿ ಆಚರಿಸತಕ್ಕದ್ದು.
5. 2023-24ನೇ ಸಾಲಿಗೆ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಮೊದಲನೇ ಜೊತೆ ಉಚಿತ ಸಮವಸ್ತ್ರ ಮತ್ತು ಪಠ್ಯಪುಸ್ತಕ ಹಾಗೂ ಖಾಸಗಿ ಶಾಲೆಗಳಿಗೆ ಪಠ್ಯಪುಸ್ತಕಗಳು ಈಗಾಗಲೇ ಸಂಬಂಧಿಸಿದ ತಾಲ್ಲೂಕುಗಳಿಗೆ ಸರಬರಾಜು ಆಗುತ್ತಿದ್ದು, ಇವುಗಳನ್ನು ಮೊದಲನೇ ಹಂತದಲ್ಲಿ ದಿನಾಂಕ: 10.04.2023ರೊಳಗೆ ಸಂಬಂಧಿಸಿದ ಶಾಲೆಗಳ ಮುಖ್ಯೋಪಾಧ್ಯಾಯರ ಮುಖಾಂತರ ಮಕ್ಕಳಿಗೆ ತಲುಪಿಸತಕ್ಕದ್ದು. ತದನಂತರ ಹಂತ ಹಂತವಾಗಿ ಮಕ್ಕಳಿಗೆ ತಲುಪಿಸಿ ಶಾಲಾ ಪ್ರಾರಂಭೋತ್ಸವದಂದು ಸಮವಸ್ತ್ರ ಧರಿಸಿ ಪಠ್ಯಪುಸ್ತಕಗಳೊಂದಿಗೆ ಶಾಲೆಗೆ ಹಾಜರಾಗಲು ಕ್ರಮವಹಿಸುವುದು.
6. ದಿನಾಂಕ:11.04.2023ರಿಂದ ದಿನಾಂಕ:28.05.2023ರ ವರೆಗೆ ಶಾಲೆಗಳಿಗೆ ಬೇಸಿಗೆ ರಜೆ ಘೋಷಣೆಯಾಗಿರುವುದರಿಂದ ಶಾಲಾ ಮುಖ್ಯಸ್ಥರು ಶಾಲಾ ದಾಸ್ತಾನು ಮತ್ತು ದಾಖಲೆಗಳನ್ನು ಹಾಗೂ ಅಕ್ಷರ ದಾಸೋಹ ಕಾರ್ಯಕ್ರಮದಡಿ ಮದ್ಯಾಹ್ನದ ಬಿಸಿಯೂಟದ ಸಾಮಾಗ್ರಿಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡುವುದು ಹಾಗೂ ವಿಧಾನ ಸಭಾ ಚುನಾವಣಾ ಕಾರ್ಯಕ್ಕೆ ಮತಗಟ್ಟೆ ಕೇಂದ್ರಗಳನ್ನಾಗಿ ಶಾಲೆಗಳನ್ನು ಬಳಸುವುದರಿಂದ ಸಹಕರಿಸಲು ಸೂಚಿಸಿದೆ.

**B. 2023-24ನೇ ಶೈಕ್ಷಣಿಕ ಸಾಲಿನಲ್ಲಿ ನಿರ್ವಹಿಸಬೇಕಾದ ಅಂಶಗಳ ಕುರಿತು**

1. ಮಕ್ಕಳ ಶಾಲಾ ಪ್ರವೇಶಾತಿಯನ್ನು/ದಾಖಲಾತಿಯನ್ನು ದಿನಾಂಕ:31.05.2023ರಿಂದ ಶಾಲಾ ಪ್ರಾರಂಭೋತ್ಸವದೊಂದಿಗೆ ಆರಂಭಿಸಿ ದಿನಾಂಕ:30.06.2023ರೊಳಗೆ ಮುಕ್ತಾಯಗೊಳಿಸತಕ್ಕದ್ದು.
2. ಕಳೆದ ಸಾಲುಗಳಲ್ಲಿ ಕೋವಿಡ್-19 ರ ಪ್ರತಿಕೂಲ ಸನ್ನಿವೇಶ ಹಾಗೂ ಕಲಿಕೆಗೆ ಪೂರಕ ವಾತಾವರಣ ಲಭ್ಯವಾಗದೆ ಮಕ್ಕಳು ನಿರಂತರವಾಗಿ ಶಾಲೆಗೆ ಗೈರುಹಾಜರಾಗಿರುವುದು ಮತ್ತು ಶಾಲೆ ಬಿಟ್ಟ ಮಕ್ಕಳನ್ನು ಕಡ್ಡಾಯವಾಗಿ ಹಾಜರಾತಿ ಅಧಿಕಾರಿ (ಶಿಕ್ಷಣ ಸಂಯೋಜಕರು) ಯೊಂದಿಗೆ ಸಂಪರ್ಕದಲ್ಲಿದ್ದು, ದಾಖಲಾತಿ ಆಂದೋಲನದ ಮುಖಾಂತರ ವ್ಯಾಪಕ ಪ್ರಚಾರ ಕೈಗೊಂಡು ಶಾಲಾ ಮುಖ್ಯವಾಹಿನಿಗೆ ತರುವುದು.
3. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸಿದಲ್ಲಿ ಈ ಬಗ್ಗೆ ಆಯಾ ಉಪನಿರ್ದೇಶಕರು (ಆಡಳಿತ) ರವರು ಈ ಕುರಿತು ಪರಿಶೀಲಿಸಿ ನಿರ್ಧರಿಸುವುದು. ಸದರಿ ಡಿಸೆಂಬರ್ ಮಾಹೆಯಲ್ಲಿ ನೀಡುವ ಕ್ರಿಸ್ ಮಸ್ ರಜಾ ಅವಧಿಯನ್ನು ಅಕ್ಟೋಬರ್ ಮಾಹೆಯ ಮಧ್ಯಂತರ ರಜೆಯಲ್ಲಿ ಕಡಿತಗೊಳಿಸಿ ಸರಿದೂಗಿಸಿಕೊಳ್ಳಲು ಕ್ರಮವಹಿಸತಕದ್ದು.

................4

4. ರಾಜ್ಯ/ಜಿಲ್ಲಾ ಕಛೇರಿಗಳಿಂದ ನಿಯೋಜಿಸಿದ ಜಿಲ್ಲಾ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳು, ಕ್ಲಸ್ಟರ್ ಹಂತದ ಸಿ.ಆರ್.ಪಿ ಗಳು ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ , ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ರವರುಗಳು ತಮ್ಮ ತಮ್ಮ ವ್ಯಾಪ್ತಿಗನುಗುಣವಾಗಿ ಕ್ರಿಯಾಶೀಲ ಮೇಲ್ವಿಚಾರಣೆ ಮತ್ತು ಶೈಕ್ಷಣಿಕ ಉಸ್ತುವಾರಿ ಕ್ರಿಯಾ ಯೋಜನೆಯನ್ನು ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಸೂಚಿಸಿದಂತೆ ತಯಾರಿಸಿಕೊಂಡು ಶಾಲೆಗಳ ಪ್ರಾರಂಭ, ಪೂರ್ವ ತಯಾರಿ, ಶಾಲೆಗಳ ಪ್ರಾರಂಭದ ಸಮಯದಲ್ಲಿ ಇರುವ ಶಿಕ್ಷಕರ ಕೊರತೆ ಹಾಗೂ ಇಲಾಖಾ ಪ್ರೋತ್ಸಾಹದಾಯಕ ಯೋಜನೆಗಳಾದ ಮದ್ಯಾಹ್ನ ಉಪಹಾರ ಯೋಜನೆ , ಸಮವಸ್ತ್ರ, ಪಠ್ಯಪುಸ್ತಕ, ಶೂ ಮತ್ತು ಸಾಕ್ಸ್ ವಿತರಣೆ ಹಾಗೂ ಶಾಲೆಗಳಲ್ಲಿ ಉತ್ತಮ ವಾರ್ಷಿಕ ಕ್ರಿಯಾ ಯೋಜನೆಯೊಂದಿಗೆ ಮಕ್ಕಳ ದಾಖಲಾತಿ ಅಭಿವೃದ್ಧಿಪಡಿಸಲು **ಮಿಂಚಿನ ಸಂಚಾರ** ಕೈಗೊಂಡು ಉಸ್ತುವಾರಿ ಮಾಡುವುದು.
5. ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತ್ರಂತ್ರ್ಯ ದಿನಾಚರಣೆ ಹಾಗೂ ನಾಡ ಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಮತ್ತು ಇತರೆ ಪ್ರಮುಖ ಜಯಂತಿಗಳನ್ನು ಕಡ್ಡಾಯವಾಗಿ ಆಯಾ ದಿನಗಳಂದು ಗೌರವಪೂರ್ವಕವಾಗಿ ಆಚರಿಸತಕ್ಕದ್ದು.
6. ನಿಗಧಿಪಡಿಸಿದ ಶೈಕ್ಷಣಿಕ ಕರ್ತವ್ಯದ ಅವಧಿಗಳು ಕಡಿಮೆಯಾಗದಂತೆ ಮುಷ್ಕರ ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ಶಾಲೆಗೆ ರಜೆ ಘೋಷಣೆಯಾದಲ್ಲಿ ಆ ಅವಧಿಯ ಶಾಲಾ ಕರ್ತವ್ಯದ ದಿನಗಳನ್ನು ಮುಂದಿನ ರಜಾ ದಿನಗಳಲ್ಲಿ ಪೂರ್ಣದಿನ ಶಾಲೆಗಳನ್ನು ನಡೆಸಿ, ಶಾಲಾ ಕರ್ತವ್ಯದ ದಿನಗಳನ್ನು ಸರಿದೂಗಿಸಿಕೊಳ್ಳಲು ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.
7. ಪರೀಕ್ಷಾ ದಿನಗಳು, ಮೌಲ್ಯಾಂಕನ ದಿನಗಳು, ಹಾಗೂ ಪೂರಕ ಶೈಕ್ಷಣಿಕ ಚಟುವಟಿಕೆ ನಡೆಸುವ ದಿನಗಳನ್ನು ಕೂಡ ಶಾಲಾ ಕರ್ತವ್ಯದ ದಿನವೆಂದು ನಿಗದಿತ ಅವಧಿಗಳಲ್ಲಿ ಪರಿಗಣಿಸುವುದು.
8. 2023-24ನೇ ಶೈಕ್ಷಣಿಕ ಸಾಲಿಗೆ ವಾರ್ಷಿಕ ಪಠ್ಯವಸ್ತುವನ್ನು ರಾಜ್ಯಾದ್ಯಂತ ಏಕರೂಪದಲ್ಲಿ ಅಳಡಿಸಿಕೊಳ್ಳಲು ಸಲಹಾತ್ಮಕವಾಗಿ ಮಾಹೆವಾರು, ಪಾಠ ಹಂಚಿಕೆ ಮಾಡಿ, ನಿಗಧಿಪಡಿಸಿದ್ದು, ಅದರಂತೆ FA-1 FA-2 FA-3 FA-4 ಮತ್ತು SA-1 SA-2 ಪರೀಕ್ಷೆಗಳನ್ನು ನಿಗಧಿಪಡಿಸಿದ ಪಠ್ಯವಸ್ತುಗನುಗುಣವಾಗಿ ನಿರ್ವಹಿಸತಕ್ಕದ್ದು.
9. ಸದರಿ ಸುತ್ತೋಲೆಯೊಂದಿಗೆ 2023-24ನೇ ಸಾಲಿನ ವಾರ್ಷಿಕ ಶೈಕ್ಷಣಿಕ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಅನುಬಂಧ-1ರಲ್ಲಿ ಪೂರೈಸಿದೆ. ಅದರಂತೆ ಶಾಲಾ/ಕ್ಲಸ್ಟರ್/ತಾಲ್ಲೂಕು ಹಾಗೂ ಜಿಲ್ಲಾ ಹಂತಗಳಲ್ಲಿ ಕ್ರಿಯಾ ಯೋಜನೆ ರೂಪಿಸಿಕೊಂಡು ಅನುಪಾಲನೆ ಮಾಡತಕ್ಕದ್ದು.
10. ಕಳೆದ ಸಾಲಿನಲ್ಲಿ 5 ಮತ್ತು 8ನೇ ತರಗತಿಗಳಿಗೆ SA-2 ಮೌಲ್ಯಂಕನಾ ನಿರ್ವಹಿಸಿದ್ದು, ಪ್ರಸ್ತುತ 2023-24ನೇ ಸಾಲಿನ ಪ್ರಕ್ರಿಯೆ ನಿರ್ವಹಣೆ ಕುರಿತು ಪ್ರತ್ಯೇಕವಾಗಿ ಕ್ರಮವಹಿಸಿ ತಿಳಿಸಲಾಗುವುದು.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ**

**1.** ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ. ರವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
3.ರಾಜ್ಯದ ಎಲ್ಲಾ ರಾಜ್ಯ ಪಠ್ಯಕ್ರಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಸ್ಥರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ

...............5

**ಪ್ರತಿಯನ್ನು**

**1.** ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

**2.** ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರಿಗೆ ಮುಂದಿನ ಕ್ರಮಕ್ಕಾಗಿ

3. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ರವರಿಗೆ ಮಾಹಿತಿಗಾಗಿ

4.ಅಧ್ಯಕ್ಷರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ 6ನೇ ಕ್ರಾಸ್ ಮಲ್ಲೇಶ್ವರಂ ಬೆಂಗಳೂರು ರವರಿಗೆ ಮಾಹಿತಿಗಾಗಿ

5.ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ 18ನೇ ಅಡ್ಡರಸ್ತೆ ಮಲ್ಲೇಶ್ವರಂ ಬೆಂಗಳೂರು ರವರಿಗೆ ಮಾಹಿತಿಗಾಗಿ

6.ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ /ಕಲಬುರಗಿ.

7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳಿಗೆ.

8.ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ರವರಿಗೆ

9.ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ.

10. ಸಹ ನಿರ್ದೇಶಕರು(ಶಾಲಾ ಶಿಕ್ಷಣ),ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

11.ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ

12. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

13.ಕಛೇರಿ ಪ್ರತಿ

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

---

### ಅನುಬಂಧ-01

## 2023-24 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಮಾರ್ಗ ಸೂಚಿ

2023-24ನೇ ಸಾಲಿನ ಶೈಕ್ಷಣಿಕ ಪ್ರಗತಿ ಯಶಸ್ವಿಗೊಳಿಸಲು ಪರಿಣಾಮಕಾರಿ ಬೋಧನಾ ಕಲಿಕಾ ಪ್ರಕ್ರಿಯೆ ಅತ್ಯವಶ್ಯಕ. ಇದಕ್ಕಾಗಿ ಉತ್ತಮ ಪೂರ್ವ ಯೋಜಿತ ತಯಾರಿ ಮುಖ್ಯವಾಗುತ್ತದೆ.

ಮಗುವಿನ ಸರ್ವತೋಮುಖ ಬೆಳವಣಿಗೆಗೆ ಶಾಲೆ ಒಂದು ಪರಿಣಾಮಕಾರಿ ವೇದಿಕೆ. ಪ್ರಯುಕ್ತ ಮಗುವಿನ ಪರಿಣಾಮಕಾರಿ ಕಲಿಕೆ ಗುಣಮಟ್ಟದಿಂದ ಕೂಡಿದ್ದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಪ್ರಯುಕ್ತ ರಾಜ್ಯದ ಎಲ್ಲಾ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಪ್ರಸ್ತುತ 2023-24 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಆಯೋಜಿಸುವುದರೊಂದಿಗೆ ವಾರ್ಷಿಕ ಪಠ್ಯವಸ್ತು ಬೋಧನೆ, ಪಠ್ಯೇತರ ಚಟುವಟಿಕೆಗಳು, ಮೌಲ್ಯಾಂಕನ ಕೈಗೊಳ್ಳಲು ಅನುವಾಗುವಂತೆ ಕೆಳಕಂಡ ಶೈಕ್ಷಣಿಕ ವಾರ್ಷಿಕ ಮಾರ್ಗಸೂಚಿ ತಯಾರಿಸಿದೆ.

ಸದರಿ ವಾರ್ಷಿಕ ಮಾರ್ಗಸೂಚಿಯು ವಾರ್ಷಿಕ/ಮಾಹೆವಾರು ಪಾಠ ಹಂಚಿಕೆ, ಪಠ್ಯೇತರ ಚಟುವಟಿಕೆಗಳು, ಪರೀಕ್ಷೆಗಳು ಮತ್ತು ಮೌಲ್ಯಂಕನ ವಿಶ್ಲೇಷಣೆ (ಸಿ.ಸಿ.ಇ)-ಗುಣಮಟ್ಟದ ಶಿಕ್ಷಣಕ್ಕಾಗಿ ಫಲಿತಾಂಶ ಮುಖಿ ಚಟುವಟಿಕೆಗಳು ಹಾಗೂ ವಿವಿದ ಶಾಲಾ ಹಂತದ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಹಾಯವಾಗುವಂತೆ ಮಾಹೆವಾರು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಹಂಚಿಕೆ ಮಾಡಿ ನಿಗದಿಪಡಿಸಿದೆ. ಇದನ್ನು ಸಲಹಾತ್ಮಕವಾಗಿ ನೀಡಿದ್ದು ಸರ್ಕಾರ ಮತ್ತು ಇಲಾಖೆ ಕಾಲಕಾಲಕ್ಕೆ ನೀಡುವ ಆದೇಶಾನುಸಾರವಾಗಿ ಬದಲಾವಣೆ ಮಾಡುವ ಷರತ್ತಿಗೊಳಪಟ್ಟು ರೂಪಿಸಿದೆ. ಅದರಂತೆ ಜಿಲ್ಲೆ/ತಾಲ್ಲೂಕು/ಕ್ಲಸ್ಟರ್ ಹಾಗೂ ಶಾಲಾ ಹಂತದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು/ಶಿಕ್ಷಕ ವೃಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪೂರ್ವಭಾವಿಯಾಗಿ ಚರ್ಚಿಸಿ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮವಹಿಸಲು ಸೂಚಿಸಿದೆ.

### 2023-24ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿಯ ಘೋಷ್ವಾರೆ

| 2023-24ನೇ ಸಾಲು ತಿಂಗಳು | ಲಭ್ಯವಾಗುವ ಶಾಲಾ ಕರ್ತವ್ಯದ ದಿನಗಳು | ವಾರ್ಷಿಕ ಪಾಠ ಹಂಚಿಕೆ (ಶೇಕಡವಾರು ಪ್ರಮಾಣದಲ್ಲಿ) | | ಸಿ.ಸಿ.ಇ ಅಡಿ ಚಟುವಟಿಕೆಗಳು ಪರೀಕ್ಷೆಗಳು ಮತ್ತು ಮೌಲ್ಯಾಂಕನ ವಿಶ್ಲೇಷಣೆ | ಪಠ್ಯೇತರ ಚಟುವಟಿಕೆಗಳು |
|---|---|---|---|---|---|
| | | 1,2,3& 4,6,7&9 ನೇ ತರಗತಿಗಳು | 5, 8 ಮತ್ತು 10ನೇ ತರಗತಿ | | |
| ಮೇ-2023 | 03 | - | - | - | ಶಾಲಾ ಪೂರ್ವ ತಯಾರಿ, ದಾಖಲಾತಿ ಆಂದೋಲನ/ ಶಾಲಾ ಪ್ರಾರಂಭೋತ್ಸವ |
| ಜೂನ್-2023 | 25 | 1-3ನೇ ತರಗತಿಗಳಿಗೆ ದಿನಾಂಕ: 01.06.2023 ರಿಂದ 30.06.2023 ರವರೆಗೆ ಸೇತುಬಂಧ ಶಿಕ್ಷಣ 25 ದಿನಗಳು ಹಾಗೂ ವಾರ್ಷಿಕ ಪಾಠ ಯೋಜನೆಯಡಿ ನಿಗಧಿಪಡಿಸಿದಂತೆ ಶೇ. 5 ರಷ್ಟು ಪಠ್ಯ ವಸ್ತು | 15 ದಿನಗಳ ಸೇತುಬಂಧ ಶಿಕ್ಷಣ ಹಾಗೂ ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br><br>ಶೇ 10% ಪಠ್ಯವಸ್ತು ಬೋಧನೆ | ಪುಸ್ತಕ ಪರಿಚಯ ಅವಧಿಗಳ ನಿರ್ವಹಣೆ, ಕಲಿಕಾ ಕೊರತೆ/ ಪ್ರಗತಿ ತಿಳಿಯಲು ಪೂರ್ವ ಪರೀಕ್ಷೆ ಸಾಫಲ್ಯ ಪರೀಕ್ಷೆ ನಿರ್ವಹಿಸಿ, ಪರಿಹಾರ ಬೋಧನೆ ನೀಡಿ ಹಿಂದಿನ | ಶಾಲಾ ಹಂತದಲ್ಲಿ ವಿವಿಧ ಶೈಕ್ಷಣಿಕ ಕ್ಲಬ್‌ಗಳ ರಚನೆ/ಬೋಧನೋಪಕರಣ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾ ಹಾಗೂ ಇ-ಕಲಿಕಾ ಕೇಂದ್ರಗಳ ಸಬಲೀಕರಣಗೊಳಿಸುವುದು. |

| | | | | | |
|---|---|---|---|---|---|
| | | ಬೋಧನೆ ನಿರ್ವಹಿಸುವುದು<br>4,6,7 & 9 ನೇ ತರಗತಿಗಳಿಗೆ ದಿನಾಂಕ: 01.06.2023 ರಿಂದ 15.06.2023 ರವರೆಗೆ ಸೇತುಬಂಧ ಶಿಕ್ಷಣ ಹಾಗೂ ನಂತರ ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ. 10 ಪಠ್ಯ ವಸ್ತು ಬೋಧನೆ ನಿರ್ವಹಿಸುವುದು | | ತರಗತಿ ಹಾಗೂ ಈಗಿನ ತರಗತಿ ಕಲಿಕೆಗೆ ಸೇತುಬಂಧ ಗೊಳಿಸುವುದು. CCE ಚಟುವಟಿಕೆಗಳ ನಿರ್ವಹಣೆ. | |
| ಜುಲೈ–2023 | 25 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ. 15 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ. 15 ಪಠ್ಯ ವಸ್ತು ನಿರ್ವಹಣೆ | FA-1 ಪರೀಕ್ಷೆ, CCE ಮೌಲ್ಯಾಂಕನ ಚಟುವಟಿಕೆಗಳು ಹಾಗೂ ಶಿಕ್ಷಕರಿಗೆ ವಿವಿಧ ತರಬೇತಿಗಳು | ಶಾಲಾ/ ಕ್ಲಸ್ಟರ್/ ಹೋಬಳಿ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಜ್ಞಾನಗೋಷ್ಠಿ, ವಿಜ್ಞಾನ ನಾಟಕ ತಾಯಂದಿರ ಸಭೆ ಹಾಗೂ ವಿದ್ಯಾರ್ಥಿಗಳ ಆಪ್ತಸಮಾಲೋಚನಾ ಸಭೆಗಳ ನಿರ್ವಹಣೆ |
| ಆಗಸ್ಟ್–2023 | 26 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ. 15 ಪಾಠ ವಸ್ತು ನಿರ್ವಹಣೆ | CCE ಚಟುವಟಿಕೆಗಳು ಹಾಗೂ ಶಿಕ್ಷಕರಿಗೆ ತರಬೇತಿಗಳು | ತಾಲ್ಲೂಕು ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಇತರೆ ಸ್ಪರ್ದೆಗಳು |
| ಸೆಪ್ಟಂಬರ್–2023 | 24 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ 1 ರಿಂದ 3ನೇ ತರಗತಿಗೆ ಶೇ 15ರಷ್ಟು ಹಾಗೂ 4,6,7,9ನೇ ತರಗತಿಗಳಿಗೆಶೇ 10 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 10 ಪಠ್ಯ ವಸ್ತು ನಿರ್ವಹಣೆ | FA-2 ಮೌಲ್ಯಾಂಕನ, CCE ಚಟುವಟಿಕೆಗಳು ಹಾಗೂ SA-1 ಮೌಲ್ಯಾಂಕನ | ಮೌಲ್ಯಾಂಕನಾ ವಿಶ್ಲೇಷಣೆ |
| ಅಕ್ಟೋಬರ್–2023 | 11 | SA-1 ಮೌಲ್ಯಾಂಕನ ನಿರ್ವಹಣೆ<br>ಪುನರಾವರ್ತನೆ | SA-1 ಮೌಲ್ಯಾಂಕನ ನಿರ್ವಹಣೆ<br>ಪುನರಾವರ್ತನೆ | SA-1 ಮೌಲ್ಯಾಂಕನ ನಿರ್ವಹಣೆ | ಜಿಲ್ಲಾ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ದಿ:08.10.2023ರಿಂದ 24.10.2023ರ ವರಗೆ ದಸರಾ ರಜೆ ಸಮುದಾಯದತ್ತ ಶಾಲೆ, ಕಾರ್ಯಕ್ರಮ |

| | | | | | |
|---|---|---|---|---|---|
| ನವಂಬರ್– 2023 | 23 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 20 ಪಾಠ ವಸ್ತು ನಿರ್ವಹಣೆ | CCE ಚಟುವಟಿಕೆ | ವಿಭಾಗ/ರಾಜ್ಯ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಶಾಲೆ/ಕ್ಲಸ್ಟರ್ ಹಾಗೂ ತಾಲ್ಲುಕು ಮಟ್ಟದ ಪ್ರತಿಭಾ ಕಾರಂಜಿ ಯುವ ಸಂಸತ್ ಕಾರ್ಯಕ್ರಮ |
| ಡಿಸೆಂಬರ್– 2023 | 25 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ<br>ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 1–3ನೇ ತರಗತಿಗಳಿಗೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 20 ಪಾಠ ವಸ್ತು ನಿರ್ವಹಣೆ | FA-3 ಮೌಲ್ಯಾಂಕನ, CCE ಚಟುವಟಿಕೆಗಳು | ರಾಜ್ಯ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಹಾಗೂ ಜಿಲ್ಲಾ/ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಯುವ ಸಂಸತ್ ಕಾರ್ಯಕ್ರಮ |
| ಜನವರಿ– 2024 | 24 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ<br>ಶೇ 15 1–3ನೇ ತರಗತಿಗಳಿಗೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 10 ಪಾಠ ವಸ್ತು ನಿರ್ವಹಣೆ | CCE ಚಟುವಟಿಕೆ | ತಾಯಂದಿರ ಸಭೆ ಹಾಗೂ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ |
| ಫೆಬ್ರವರಿ– 2024 | 23 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 5 ಪಠ್ಯವಸ್ತು ಬೋಧನೆ ಪುನರಾವರ್ತನಾ ತರಗತಿಗಳ ನಿರ್ವಹಣೆ | ಪುನರಾವರ್ತನಾ ತರಗತಿಗಳ ನಿರ್ವಹಣೆ | FA-4 CCE ಚಟುವಟಿಕೆ ಪ್ರಿಪರೇಟರಿ ಪರೀಕ್ಷೆ | ಫಲಿತಾಂಶ ಮುಖಿ ಕಾರ್ಯಕ್ರಮಗಳ ಆಯೋಜನೆ ಮತ್ತು ಅನುಪಾಲನೆ |
| ಮಾರ್ಚ್– 2024 | 26 | ಪುನರಾವರ್ತನೆ, SA-2 ಪರೀಕ್ಷೆ ಮೌಲ್ಯಮಾಪನಾ ವಿಶ್ಲೇಷಣೆ | ಪುನರಾವರ್ತನೆಗಳು 5 ಮತ್ತು 8ಕ್ಕೆ ಮೌಲ್ಯಾಂಕನ ಮತ್ತು ಮೌಲ್ಯಮಾಪನಾ ವಿಶ್ಲೇಷಣೆ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಿರ್ವಹಣೆ | – | SA-2 ಪರೀಕ್ಷೆಗಳು ಮೌಲ್ಯಾಂಕನಾ ನಿರ್ವಹಣೆ ವಾರ್ಷಿಕ ಪರೀಕ್ಷೆಗಳ ನಿರ್ವಹಣೆ ಮೌಲ್ಯ ಮಾಪನಾ ಕಾರ್ಯ ಮತ್ತು ವಿಶ್ಲೇಷಣೆ |
| ಏಪ್ರಿಲ್–2024 | 9 | ಮೌಲ್ಯ ಮಾಪನ ಕಾರ್ಯ | ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಿರ್ವಹಣೆ ಮತ್ತು ಮೌಲ್ಯಮಾಪನಾ ಕಾರ್ಯ | ಮೌಲ್ಯ ಮಾಪನಾ ಕಾರ್ಯ | ಸಮುದಾಯದತ್ತ ಶಾಲೆ ಕಾರ್ಯಕ್ರಮ ಹಾಗೂ ಫಲಿತಾಂಶ ಪ್ರಕಟಣೆ |
| ಒಟ್ಟು | 244 | | | | |

## ಶೇಕಡಾವಾರು ಮಾಹೆವಾರು /ವಾರ್ಷಿಕ ಪಾಠ ಹಂಚಿಕೆ ಘೋಷ್ವಾರೆ

| ತರಗತಿಗಳು | ಜೂನ್-23 | ಜುಲೈ-23 | ಅಗಸ್ಟ್-23 | ಸೆಪ್ಟಂಬರ್-23 | ಅಕ್ಟೋಬರ್-23 | ಒಟ್ಟು | ನವೆಂಬರ್-23 | ಡಿಸೆಂಬರ್-23 | ಜನವರಿ-24 | ಫೆಬ್ರವರಿ-24 | ಮಾರ್ಚ್-24 | ಒಟ್ಟು | ಅಂತಿಮ ಒಟ್ಟು |
|---|---|---|---|---|---|---|---|---|---|---|---|---|---|
| 1,2,3ನೇ ತರಗತಿಗಳು | 5 | 15 | 15 | 15 | – | **50** | 15 | 15 | 15 | 5 | – | **50** | 100 |
| 4,6,7 ಮತ್ತು 9ನೇ ತರಗತಿ | 10 | 15 | 15 | 10 | – | **50** | 15 | 15 | 15 | 5 | – | **50** | 100 |
| 5,8 ಮತ್ತು 10ನೇ ತರಗತಿಗಳು | 10 | 15 | 15 | 10 | – | **50** | 20 | 20 | 10 | – | – | **50** | 100 |

**ಷರಾ:–** ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಮೇಲ್ಕಂಡಂತೆ ಮಾಹೆವಾರು ಶೇಕಡವಾರು ಪ್ರಮಾಣದಲ್ಲಿ ವಾರ್ಷಿಕ ಪಾಠ ಹಂಚಿಕೆಯನ್ನು ಮಾಡಿದ್ದು, ಅಕ್ಟೋಬರ್–2023 ಕೊನೆಯ ವಾರ ಮತ್ತು ದಿನಾಂಕ: 10.02.2024 ರಿಂದ 10.03.2024 ರವರೆಗೆ ಪುನರಾವರ್ತನೆ ತರಗತಿಗಳನ್ನು ಹಮ್ಮಿಕೊಳ್ಳುವುದು.

1 ರಿಂದ 10 ನೇ ತರಗತಿಗಳಿಗೆ ವಿಷಯವಾರು, ತರಗತಿವಾರು ಮತ್ತು ಘಟಕವಾರು ಬೋಧನಾಂಶಗಳನ್ನು ಮಾಹೆವಾರು ನಿಗಧಿಪಡಿಸಿ ಹಂಚಿಕೆಮಾಡಲಾಗಿದ್ದು, ಅದರಂತೆ ನಿರ್ವಹಿಸುವುದು. ಇದರಿಂದಾಗಿ ಏಕರೂಪದ ಮೌಲ್ಯಾಂಕನ ವಿಶ್ಲೇಷಣೆ ಸಾಧ್ಯವಾಗುತ್ತದೆ (ವಾರ್ಷಿಕ ಪಾಠ ಯೋಜನೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

## 2023–24 ನೇ ಸಾಲಿನ ಮಾಹೆವಾರು ಶೈಕ್ಷಣಿಕ ಕಾರ್ಯಕ್ರಮಗಳ / ಚಟುವಟಿಕೆಗಳ ಕಾರ್ಯಸೂಚಿ.

| ದಿನಾಂಕ | ಕಾರ್ಯಕ್ರಮದ ವಿವರ | ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು [ಪ್ರಕ್ರಿಯೆಯ ಸಂಕ್ಷಿಪ್ತ ವಿವರ] |
|---|---|---|
| | **ಮೇ–2023** | |
| 29.05.2023 | **ಶಾಲೆ ಪ್ರಾರಂಭ ಪೂರ್ವತಯಾರಿ ಮತ್ತು ಪ್ರಾರಂಭೋತ್ಸವದ ಪೂರ್ವ ಸಿದ್ಧತೆ.** | ***ಪೂರ್ವ ಸಿದ್ಧತೆ:***<br>1. ಶಾಲಾ ಸ್ವಚ್ಛತೆ ಕಾರ್ಯ & ಶಾಲೆಯಲ್ಲಿ ವಿವಿಧ ಸುರಕ್ಷತೆ ಕ್ರಮಗಳನ್ನು ಪರಿಶೀಲಿಸಿ ಸರಿಪಡಿಸುವುದು.<br>2. ಎಸ್.ಡಿ.ಎಂ.ಸಿ ಸಭೆ ನಡೆಸಿ ಶಾಲಾ ಪ್ರಾರಂಭೋತ್ಸವದ ಬಗ್ಗೆ ಚರ್ಚೆ ಮಾಡುವುದು.<br>3. ಈಗಾಗಲೇ ಸಿದ್ಧಪಡಿಸಿಕೊಂಡಿರುವ ದಾಖಲೆಗಳ ಜೊತೆಯಲ್ಲಿ ಕೆಳಗೆ ನಮೂದಿಸಿರುವ ಶಾಲಾ ದಾಖಲೆಗಳ ಸಿದ್ದಪಡಿಸಿಕೊಳ್ಳುವುದು.<br>▪ ಶಾಲಾ ವೇಳಾ ಪಟ್ಟಿ.<br>▪ ವಿಷಯವಾರು ವಾರ್ಷಿಕ ಕ್ರಿಯಾ ಯೋಜನೆ ರಚಿಸುವುದು<br>▪ ಶಿಕ್ಷಕರ ವೇಳಾಪಟ್ಟಿ(ತರಗತಿವಾರು, ಶಿಕ್ಷಕರವಾರು)<br>▪ ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸುವುದು.<br>▪ ಶಾಲಾ ಪಂಚಾಂಗ (ಶಾಲಾ ವಾರ್ಷಿಕ ಕ್ಯಾಲೆಂಡರ್)<br>4. ಕಡ್ಡಾಯವಾಗಿ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಸಭೆ ನಡೆಸಿ ಚರ್ಚಿಸಿ ಶಾಲಾ ಪ್ರಾರಂಭೋತ್ಸವಕ್ಕೆ ಪೂರ್ವ ತಯಾರಿ ಮಾಡಿಕೊಳ್ಳುವುದು. |

| | | |
|---|---|---|
| | | **ಮುಖ್ಯ ಶಿಕ್ಷಕರು ಸಹ ಶಿಕ್ಷಕರಿಗೆ ವಿವಿಧ ಪ್ರಭಾರಗಳ ಹಂಚಿಕೆ / ನಿರ್ವಹಣೆ, ತರಗತಿಯ ಶಿಕ್ಷಕರನ್ನು ನೇಮಿಸುವುದು.**<br>1. ಪ್ರಸ್ತುತ ವರ್ಷದಲ್ಲಿ ಹಿಂದಿನ ತರಗತಿಗಳಿಂದ ಉತ್ತೀರ್ಣ ರಾಗಿರುವ ಮಕ್ಕಳ ಹಾಜರಾತಿ ವಹಿಗಳನ್ನು (Students Attendance Register) ಸಿದ್ಧಪಡಿಸುವುದು.<br>2. ಶಿಕ್ಷಕ/ಶಿಕ್ಷಕಿಯರು ತಮ್ಮ ಶೈಕ್ಷಣಿಕ ದಾಖಲೆಗಳಾದ ವಿಷಯವಾರು ವಾರ್ಷಿಕ ಕಾರ್ಯ ಯೋಜನೆ, ಪಾಠ ಯೋಜನೆ, ಮುಂತಾದವುಗಳಿಗೆ ಮುಖ್ಯ ಶಿಕ್ಷಕರಿಂದ ಅನುಮೋದನೆ ಪಡೆದುಕೊಳ್ಳುವುದು.<br>3. ಮುಖ್ಯಶಿಕ್ಷಕರು ಸಹಶಿಕ್ಷಕರೊಡಗೂಡಿ ಸಮುದಾಯದ ಸಹಭಾಗಿತ್ವದೊಂದಿಗೆ ಶಾಲಾ ಪ್ರಾರಂಭೋತ್ಸವಕ್ಕೆ ಸಂಪೂರ್ಣ ಸಿದ್ದತೆ ಮಾಡಿಕೊಳ್ಳುವುದು.<br>4. ಸಮುದಾಯದೊಂದಿಗೆ ಸೇರಿ ಜಾಥಾ ಮಾಡಿ ಶಾಲಾ ಪ್ರಾರಂಬೋತ್ಸವದ ದಿನವೇ ಅಂದರೆ 31.05.2022 ರಂದೇ ಮಕ್ಕಳು ಶಾಲೆಗೆ ಬರಲು ಅರಿವು ಮೂಡಿಸುವುದರ ಜೊತೆಗೆ ಪೋಷಕರನ್ನು ಶಾಲಾ ಪ್ರಾರಭೋತ್ಸವಕ್ಕೆ ಆಹ್ವಾನಿಸುವುದು. |
| 30.05.2023 | **ಸೇತುಬಂಧ ಶಿಕ್ಷಣ (ಪುಸ್ತಕ ಪರಿಚಯ ಅವಧಿಗಳ ನಿರ್ವಹಣೆ ಕುರಿತ ಸಿದ್ದತೆ) ಪೂರ್ವಭಾವಿ ಸಭೆಗಳು, ವಿವಿಧ ಹಂತದ ತರಬೇತಿಗಳು ಮತ್ತು ಸಮಾಲೋಚನಾ ಸಭೆಗಳಲ್ಲಿನ ಕೈಗೊಂಡ ನಿರ್ಣಯಗಳ ಅಂಗೀಕಾರ/ಅನುಷ್ಠಾನ** | ಶೈಕ್ಷಣಿಕ ವರ್ಷದ ವಾರ್ಷಿಕ ಚಟುವಟಿಕೆಗಳಾದ ಬೋಧನಾ ಕಲಿಕೆಗೆ ಮಾಹೆವಾರು ಪಾಠ ಹಂಚಿಕೆ, ಪರೀಕ್ಷೆಗಳು ಹಾಗೂ ಮೌಲ್ಯಮಾಪನ ವಿಶ್ಲೇಷಣೆ, ವಿವಿಧ ಕಾರ್ಯಕ್ರಮಗಳ ನಿರ್ವಹಣೆಗಾಗಿ ಅವಧಿ ಮತ್ತು ದಿನಾಂಕಗಳನ್ನು ಪೂರ್ವ ಭಾವಿಯಾಗಿ ಚರ್ಚಿಸುವುದು. ಮತ್ತು ಶಾಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪ್ರಭಾರಗಳಾದ (ತರಗತಿ ಶಿಕ್ಷಕರು, ಶೈಕ್ಷಣಿಕ ಪ್ರವಾಸ / ಕ್ರೀಡೆ/ ವಾರ್ಷಿಕೋತ್ಸವ / ಆಚರಣೆಗಳು ಇತರೆ) ಅನುಷ್ಠಾನಕ್ಕೆ ಹಂಚಿಕೆ ಮಾಡುವುದು. |
| 31.05.2023 | **ಶಾಲಾ ಪ್ರಾರಂಭೋತ್ಸವ** | ಶಾಲಾ ಪ್ರಾರಂಭೋತ್ಸವವನ್ನು ಒಂದು ಯಾಂತ್ರಿಕ ಪ್ರಕ್ರಿಯೆ ಎಂದು ಪರಿಗಣಿಸದೆ ಅತ್ಯಂತ ಉತ್ಸಾಹದಿಂದ ಮುಖ್ಯಶಿಕ್ಷಕರು. ಸಹಶಿಕ್ಷಕರು. ಎಸ್.ಡಿ.ಎಂ.ಸಿ ಹಾಗೂ ಪೋಷಕರು ಸೇರಿ ಶಾಲಾ ಮಕ್ಕಳನ್ನು, ಕಲಿಕಾ ಸಾಧಕರುಗಳನ್ನು ಸ್ವಾಗತಿಸುವ ರೀತಿಯಲ್ಲಿ ವಿಶೇಷವಾಗಿ ಸ್ವಾಗತಿಸುವುದು.<br>1. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಶಾಲಾ ವಾತಾವರಣವನ್ನು ಆಕರ್ಷಣೀಯವಾಗಿರಿಸುವುದು.<br>2. ಮೊದಲ ಎರಡು ಅವಧಿಗಳಲ್ಲಿ ಮಕ್ಕಳನ್ನು ಆಹ್ವಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಮೂರನೆಯ ಅವಧಿಯಿಂದಲೇ ಹಾಜರಾಗಿರುವ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸುವುದು. ಹಾಜರಾಗದಿರುವ ಮಕ್ಕಳನ್ನು ಶಾಲೆಗೆ ಕರೆತರುವಂತೆ ಹಾಜರಾಗಿರುವ ಮಕ್ಕಳನ್ನು ಪ್ರೇರೇಪಿಸುವುದು.<br>3. ಮೊದಲನೆಯ ದಿನದಿಂದಲೇ ಪಾಠ/ಸೇತುಬಂಧ ಶಿಕ್ಷಣ ಆರಂಭಿಸುವುದು. ಈ ಮಾಹಿತಿ ಮಕ್ಕಳಿಗೆ ಮತ್ತು ಪೋಷಕರಿಗೆ ತಲುಪುವಂತೆ ಮಾಡುವುದು.<br>4. ಅಕ್ಷರ ದಾಸೋಹದ ಕಾರ್ಯಕ್ರಮದಡಿ ಮದ್ಯಾಹ್ನದ ಬಿಸಿ ಊಟದ ಕಾರ್ಯಕ್ರಮವನ್ನು ಸಿಹಿಯೂಟದೊಂದಿಗೆ ಆಯೋಜಿಸುವುದು.<br>**ವಿ.ಸೂ: ಎಲ್ಲಾ ಶಿಕ್ಷಕರು ಶಾಲಾ ಪ್ರಾರಂಭೋತ್ಸವದ ಕಾರ್ಯಕ್ರಮವನ್ನು ತಮ್ಮ ವಿಷಯಾವಾರು ಪಾಠ/ ಸೇತುಬಂಧ ಶಿಕ್ಷಣ ಆರಂಭಿಸುವುದರೊಂದಿಗೆ ಅರ್ಥಪೂರ್ಣವಾಗಿ ಪ್ರಾರಂಭಿಸುವುದು.** |

| | | |
|---|---|---|
| 31.05.2023<br>ರಿಂದ<br>03.06.2023 | **ಶಾಲಾ ದಾಖಲಾತಿ ಆಂದೋಲನ** | ವಿವಿಧ ಕಾರಣಗಳಿಂದಾಗಿ ಮಕ್ಕಳು ಶಾಲೆಯನ್ನು ಮಧ್ಯಭಾಗದಲ್ಲಿ ಬಿಡುವುದು ಹಾಗೂ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗದಿರುವುದರಿಂದ ದಾಖಲಾತಿ ಪ್ರಮಾಣವು ಕಡಿಮೆಯಾಗುವ ಸಾಧ್ಯತೆ ಇದ್ದು, ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಪ್ರಯುಕ್ತ ಪರಿಣಾಮಕಾರಿಯಾದ ದಾಖಲಾತಿ ಆಂದೋಲನವನ್ನು ಕೆಳಕಂಡಂತೆ ನಿರ್ವಹಿಸುವುದು:<br>ದಿನಾಂಕ:30.06.2023ರ ವರೆಗಿನ ದಾಖಲಾತಿ ಪ್ರಕ್ರಿಯೆಯನ್ನು ಆಧರಿಸಿ, ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿ ಶಾಲೆಗೆ ಬಾರದಿರುವ ಮಕ್ಕಳು, ಶಾಲೆಗೆ ದಾಖಲಾಗದಿರುವ ಅರ್ಹ ವಯಸ್ಸಿನ ಮಕ್ಕಳ ಮತ್ತು ಶಾಲೆ ಬಿಟ್ಟ ಮಕ್ಕಳ ಪಟ್ಟಿಯನ್ನು ಹಾಜರಾತಿ ಅಧಿಕಾರಿಯಾದ ಶಿಕ್ಷಣ ಸಂಯೋಜಕರುಗಳಿಂದ ಪಡೆದು ಅನುಪಾಲನೆಗೆ ಸಿದ್ಧಪಡಿಸಿಕೊಳ್ಳುವುದು ಮತ್ತು ಎಸ್.ಎ.ಟಿ.ಎಸ್.ನಲ್ಲಿ ಇಂದೀಕರಿಸುವುದು.<br>1. ಶಿಕ್ಷಕರು, ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸಹಯೋಗದೊಂದಿಗೆ ಇಂತಹ ಮಕ್ಕಳ ಮನೆ ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಿ ಶಾಲೆಗೆ ದಾಖಲಿಸುವುದು.<br>2. ಶಾಲಾ ಪ್ರಾರಂಭದ ಅವಧಿಗೆ ಮುಂಚಿತವಾಗಿ ಅದೇ ದಿನ ಜಾಥಾ, ಘೋಷಣೆ ಮತ್ತು ಭಿತ್ತಿಪತ್ರ/ ಕರಪತ್ರಗಳನ್ನು ಹಂಚುವ ಮೂಲಕ ಶಾಲಾ ಶಿಕ್ಷಣದ ಪ್ರಾಮುಖ್ಯತೆ ತಿಳಿಸುವುದು ಹಾಗೂ ದಾಖಲಾತಿ ಅಂದೋಲನವನ್ನು ಅರ್ಥಪೂರ್ಣಗೊಳಿಸುವುದು. |
| | **ಜೂನ್ 2023** | |
| 01.06.2023<br>ರಿಂದ<br>30.06.2023ರ ವರೆಗೆ 1 ರಿಂದ 3ನೇ ತರಗತಿ<br><br>01.06.2023<br>ರಿಂದ<br>15.06.2023<br>ರವರೆಗೆ<br>4 ರಿಂದ 10ನೇ ತರಗತಿವರೆಗೆ | **ಸೇತುಬಂಧ ಶಿಕ್ಷಣ ಅನುಷ್ಠಾನ**<br>**ಸೇತುಬಂಧ ಕಾರ್ಯಕ್ರಮದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವವನ್ನು ಪರಿಚಯಿಸುವುದರೊಂದಿಗೆ ವಾರ್ಷಿಕ ಪಾಠ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ 10 ರಷ್ಟು ಪಾಠ ಬೋಧನೆ ನಿರ್ವಹಿಸುವುದು.** | ಸೇತುಬಂಧ ಶಿಕ್ಷಣವನ್ನು 1 ರಿಂದ 3ನೇ ತರಗತಿಗಳಿಗೆ 30 ದಿನಗಳು. ಹಾಗೂ 4 ರಿಂದ 10ನೇ ತರಗತಿಗಳಿಗೆ 15 ದಿನಗಳು ಮಾತ್ರ ಸೇತುಬಂಧ ಶಿಕ್ಷಣವನ್ನು ಇಲಾಖೆ ನಿಗಧಿಪಡಿಸಿದ ಮಾರ್ಗಸೂಚಿಯಂತೆ ನಿರ್ವಹಿಸುವುದು.<br>ಶಿಕ್ಷಕರ ಬಳಿ ಕಳೆದ ಸಾಲಿನಲ್ಲಿ ನಡೆಸಿದ ಮೌಲ್ಯಾಂಕನ ವಿಶ್ಲೇಷಣೆಯ ವರದಿಯಂತೆ ಕಲಿಕಾ ಕೊರತೆಗಳ ದತ್ತಾಂಶಗಳು ಲಭ್ಯವಿರುತ್ತವೆ. ಇವುಗಳನ್ನು ಅವಲೋಕಿಸಿ, ವಿಶ್ಲೇಷಿಸುವುದು. ಇದಕ್ಕೆ ಪೂರಕವಾಗಿ ನೈದಾನಿಕ ಪರೀಕ್ಷೆ ಹಮ್ಮಿಕೊಂಡು ಫಲಿತಾಂಶ ವಿಶ್ಲೇಷಿಸಬೇಕು.<br>1ರಿಂದ 3ನೇ ತರಗತಿಗೆ ಪೂರ್ವ ಪರೀಕ್ಷೆಯನ್ನು ನಡೆಸಿ, ವಿಶ್ಲೇಷಿಸಿ, ಕಲಿಕಾ ಹಿನ್ನಡೆ ಗುರುತಿಸಿ ಪರಿಹಾರ ಬೋಧನೆ ನೀಡುವುದು. ನಂತರ ದಿನಾಂಕ:20.06.2023ರಂದು ಸಾಪಲ್ಯ ಪರೀಕ್ಷೆಯನ್ನು ನಿರ್ವಹಿಸುವುದು.<br>4 ರಿಂದ 10ನೇ ತರಗತಿಗೆ ಪೂರ್ವ ಪರೀಕ್ಷೆ ನಡೆಸಿ, ವಿಶ್ಲೇಷಿಸಿ ಕಲಿಕಾ ಹಿನ್ನಡೆ ಗುರುತಿಸಿ ಪರಿಹಾರ ಬೋಧನೆ ನೀಡುವುದು. ನಂತರ ದಿನಾಂಕ:13.06.2023ರಂದು ಸಾಫಲ್ಯ ಪರೀಕ್ಷೆ ನಡೆಸಿ ವಿಶ್ಲೇಶಿಸಿ ನಿರಂತರ ಪರಿಹಾರ ಬೋಧನೆಗೆ ಅಗತ್ಯ ಮಕ್ಕಳ ಗುರುತಿಸುವುದು. |
| ದಿನಾಂಕ:<br>01.06.2023<br>ರಿಂದ<br>06.06.2023<br>ರವರೆಗೆ | **ಪುಸ್ತಕ ಪರಿಚಯ ಅವಧಿಗಳು & ನಿರ್ವಹಣೆ** | ವಾರ್ಷಿಕ ಪಾಠ ಯೋಜನೆ/ ಕ್ರಿಯಾ ಯೋಜನೆಯನ್ನು ವಿವರಿಸಿ ಮಾಹೆವಾರು ಯೋಜಿಸಿದ ಪರೀಕ್ಷೆಗಳು / ಮೌಲ್ಯಾಂಕನ ವಿಶ್ಲೇಷಣೆ (ಸಿ.ಸಿ.ಇ) ಪಠ್ಯದಲ್ಲಿನ ಅಧ್ಯಾಯಗಳ ಮುಖ್ಯಾಂಶಗಳು, ಹಿಂದಿನ ತರಗತಿಯಲ್ಲಿನ ಕಲಿಕಾಂಶಗಳೊಂದಿಗೆ ಪ್ರಸ್ತುತ ಪಾಠಕ್ಕೆ ಹೊಂದಾಣಿಕೆ ಮಾಡಿ ನಿರ್ವಹಿಸುವುದು. ಆಂತರಿಕ/ಬಾಹ್ಯ ಮೌಲ್ಯಮಾಪನ ವಿಶ್ಲೇಷಣೆ ಬಗ್ಗೆ ಇತರೆ ಕಾರ್ಯಕ್ರಮಗಳ ನಿರ್ವಹಣೆ ಮತ್ತು ಮಹತ್ವ, ಪಾಲ್ಗೊಳ್ಳುವಿಕೆ ಕುರಿತಾದ ಮುಖ್ಯಾಂಶಗಳನ್ನು ವಿವರಣೆ ನೀಡಿ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವುದು. (ಕೆಳಕಂಡ ಸೂಚನೆ 11 ಅನ್ನು ಗಮನಿಸಿ) |

| | | |
|---|---|---|
| | **ವಿವಿಧ ಕ್ಲಬ್‌ಗಳ ರಚನೆ** | ವಿದ್ಯಾರ್ಥಿಗಳ ಪ್ರತಿಭೆಗಳನ್ನಾಧರಿಸಿ ಅವರ ಆಸಕ್ತಿ ಕ್ಷೇತ್ರ ಪರಿಚಯಿಸಿ ಶಾಲೆಯಲ್ಲಿ ವಿವಿಧ ರೀತಿಯ ಕ್ಷೇತ್ರವಾರು ಸಂಘಗಳನ್ನು /ಕ್ಲಬ್‌ಗಳನ್ನು (ಸಾಹಿತ್ಯ/ ಕ್ರೀಡಾ/ ವಿಜ್ಞಾನ/ ಕಲಾ/ ಸಾಂಸ್ಕೃತಿಕ ಕ್ಲಬ್‌ಗಳು/ ವಿದ್ಯಾರ್ಥಿಗಳ ಸಂಘಗಳು, ಇಕೋಕ್ಲಬ್, ಇತರೆ) ರಚಿಸುವುದರೊಂದಿಗೆ ವಿದ್ಯಾರ್ಥಿಗಳಿಗೆ ಜವಾಬ್ದಾರಿ ನೀಡುವುದು. |
| | **ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಆಧರಿಸಿ ಶ್ರೇಣಿಕರಿಸುವುದು.** | ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಆಧರಿಸಿ 06 ಗುಂಪುಗಳನ್ನಾಗಿಸಿ ಹಿರಿಯ ಪ್ರಾಥಮಿಕ ಶಾಲೆ/ ಪ್ರೌಢಶಾಲೆಯಲ್ಲಿ ವಿಷಯವಾರು ಶಿಕ್ಷಕರಿಗೆ ದತ್ತು ನೀಡುವುದು ಹಾಗೂ ಈ ಗುಂಪುಗಳಿಗೆ ಪ್ರತಿ ಮಾಹೆವಾರು ಸಿ.ಸಿ.ಇ ಅಡಿ ಶೈಕ್ಷಣಿಕ ಚಟುವಟಿಕೆಗಳನ್ನು (Project Works) ಸ್ಪರ್ಧಾತ್ಮಕವಾಗಿ ನೀಡುವುದರೊಂದಿಗೆ ಆಯಾ ಮಾಹೆಯಲ್ಲಿ ನಿರ್ವಹಿಸಿದ ಬೋಧನಾಂಶಗಳ/ ಕಲಿಕಾ ಪ್ರಗತಿಯನ್ನು ಪರಿಶೀಲಿಸುವುದು. (ಅನುಬಂಧದಲ್ಲಿನ ಚಟುವಟಿಕೆ ಬ್ಯಾಂಕ್ ಗಮನಿಸಿ). |
| 05.06.2023 | **ವಿಶ್ವ ಪರಿಸರ ದಿನಾಚರಣೆ.** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ವಿಶ್ವ ಪರಿಸರ ದಿನದ ಮಹತ್ವ ತಿಳಿಸುವುದು. |
| 12.06.2023 | **ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ.** | ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಾಲಾ ಅವಧಿಯ ನಂತರ ಸಮುದಾಯಕ್ಕೆ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯ ಮಹತ್ವ ತಿಳಿಸುವುದು. |
| 15.06.2023 ರಿಂದ 30.06.2023 | **ವಾರ್ಷಿಕ ಪಾಠ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 10 ಪಠ್ಯವಸ್ತು ಬೋಧನೆ ನಿರ್ವಹಿಸುವುದು.** | ಸೇತುಬಂಧಗಳ ಜೊತೆಯಲ್ಲಿ 1 ರಿಂದ 3 ನೇ ತರಗತಿಗಳಿಗೆ ವಾರ್ಷಿಕ ಪಾಠ ಹಂಚಿಕೆಯಲ್ಲಿ ನಿಗಧಿಪಡಿಸಿದಂತೆ ಶೇ. 5 ರಷ್ಟು ಪಠ್ಯವಸ್ತು ಬೋಧನೆ ಕೈಗೊಳ್ಳುವುದು.<br>ಸೇತುಬಂಧ ಶಿಕ್ಷಣ ಮುಗಿದ 4 ರಿಂದ 10ನೇ ತರಗತಿಗಳಿಗೆ ದಿನಾಂಕ: 15.06.2023 ರಿಂದಲೇ ಶೇ. 10 ರಷ್ಟು ಪಾಠ ಬೋಧನೆ ಪ್ರಾರಂಭಿಸಿ/ನಿರ್ವಹಿಸಿ ಬೋಧನಾ ಕಲಿಕಾ ಪ್ರಕ್ರಿಯೆಗೆ ಚಾಲನೆ ನೀಡುವುದು. |
| 28.06.2023 ರಿಂದ 30.06.2023 | **ಸಿ.ಸಿ.ಇ ಚಟುವಟಿಕೆ-1 (Project) ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ತರಗತಿವಾರು ಆಧ್ಯತೆ ಮತ್ತು ಅವಶ್ಯಕತೆವಾರು ಸಂಘಟಿಸಿ ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಪಠ್ಯಪೂರಕ ಚಟುವಟಿಕೆಗಳು** | ಶಾಲಾ ಹಂತದಲ್ಲಿ ವಿವಿಧ ಶೈಕ್ಷಣಿಕ ಕ್ಲಬ್‌ಗಳನ್ನು ರಚನೆ/ಬೋಧನೋಪಕರಣ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾ ಹಾಗೂ ಇ-ಕಲಿಕಾ ಕೇಂದ್ರಗಳ ಸಬಲೀಕರಣಗೊಳಿಸುವುದು. |
| | **ಜುಲೈ-2023** | |
| 01.07.2023 ರಿಂದ ಪ್ರಾರಂಭ | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 15 ಪಠ್ಯ ವಸ್ತು ಬೊಧನೆ** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ 1 ರಿಂದ 10ನೇ ತರಗತಿಗಳಿಗೆ ಶೇ. 15 ರಷ್ಟು ಪಠ್ಯ ವಸ್ತು ಬೊಧನೆಯನ್ನು ನಿರ್ವಹಿಸುವುದು. |
| 04.07.2023 ರಿಂದ 08.07.2023 | **ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ (ಕೌನ್ಸಿಲಿಂಗ್) ನಿರ್ವಹಿಸುವುದು.** | ವಿದ್ಯಾರ್ಥಿಗಳಿಗೆ ತರಗತಿವಾರು ಆಪ್ತ ಸಮಾಲೋಚನಾ (ಕೌನ್ಸಿಲಿಂಗ್) ವೇಳಾಪಟ್ಟಿ ನಿಗದಿಪಡಿಸಿ ತಮ್ಮ ದೈನಂದಿನ ವ್ಯಾಸಂಗಕ್ಕೆ ಪೂರಕ ಸಾಮಗ್ರಿಗಳಾದ ಪಠ್ಯಪುಸ್ತಕ, ನೋಟ್ಸ್, ಮನೆಗೆಲಸ (ಹೋಂವರ್ಕ್), ಇತರೆ ಸಾಮಗ್ರಿಗಳನ್ನು ತರಗತಿ/ವಿಷಯ ಶಿಕ್ಷಕರಿಗೆ ತೋರಿಸುವುದು. ತರಗತಿ/ವಿಷಯ |

| | | |
|---|---|---|
| | | ಶಿಕ್ಷಕರು ಪರಿಶೀಲಿಸಿ, ಅವರ ದೈನಂದಿನ ಸ್ಟಡಿ ಟೈಂ–ಟೇಬಲ್, ಮನೆಗೆಲಸ (ಹೋಂವರ್ಕ್) ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡುವುದು (ವಿವರವನ್ನು ಚೆಕ್‌ಲಿಸ್ಟ್‌ನಂತೆ ಪ್ರತ್ಯೇಕವಾಗಿ ದಾಖಲಿಸಿಕೊಳ್ಳುವುದು). |
| 11.07.2023 ರಿಂದ 13.07.2023 | **ಹೋಬಳಿ ಮಟ್ಟದ ಕ್ರೀಡಾಕೂಟ** | ಶಾಲೆ/ಕ್ಲಸ್ಟರ್ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸುವುದು ಹಾಗೂ ಪಾಲ್ಗೊಳ್ಳುವುದು. |
| 11.07.2023 | **ವಿಶ್ವ ಜನಸಂಖ್ಯಾ ದಿನ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ವಿಶ್ವ ಜನಸಂಖ್ಯಾ ದಿನದ ಮಹತ್ವ ತಿಳಿಸುವುದು. |
| 14.07.2023 ರಿಂದ 15.07.2023 | **ಅನುಭವ ಹಂಚಿಕೆ ಕಾರ್ಯಗಾರ** Experience Sharing programme | ಮುಖ್ಯ ಶಿಕ್ಷಕರುಗಳು ತಮ್ಮ ಸಮೀಪದ ಶಾಲೆಗಳ ಆಯ್ದ ವಿಷಯ ಸಂಪನ್ಮೂಲ ಶಿಕ್ಷಕರನ್ನು ಪರಸ್ಪರ ಶಾಲೆಗೆ ಆಹ್ವಾನಿಸಿಕೊಂಡು ಹೊಸದಾಗಿ ನೇಮಿಸಿಕೊಂಡ ಅನನುಭವಿ ಶಿಕ್ಷಕರೊಂದಿಗೆ ಪರಸ್ಪರ ಅನುಭವ ಹಂಚಿಕೆ ಮಾಡಿಕೊಂಡು ಕ್ಲಿಷ್ಟ ಬೋಧನಾಂಶಗಳ ಕುರಿತು ಮಾರ್ಗದರ್ಶನ ಪಡೆಯುವುದು. |
| 18.07.2023 ರಿಂದ 20.07.2023 | **ಮೊದಲನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ–1)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ವಿಷಯದ ಬೋಧನಾ ಅವಧಿಯಲ್ಲಿ ಸದರಿ FA-1 ಮೌಲ್ಯಮಾಪನ ಹಮ್ಮಿಕೊಳ್ಳುವುದು. (ನಿಗದಿತ ಅವಧಿಯಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು) ನಂತರ ದೈನಂದಿನ ಪಾಠಗಳು ಮುಂದುವರೆಯುತ್ತದೆ. (15.06.2023ರಿಂದ 15.07.2023ರ ವರೆಗೆ ನಿರ್ವಹಿಸಿದ ಪಾಠಬೋಧನೆಗಳನ್ನಾಧರಿಸಿದಂತೆ FA-1 ನಿರ್ವಹಣೆ |
| 26.07.2023 | **ಪೋಷಕರ/ ತಾಯಂದಿರ ಸಭೆ *(OPEN HOUSE)*** | Open House- ಪೋಷಕರ/ ತಾಯಂದಿರ ಸಭೆ ಕರೆದು ವಿದ್ಯಾರ್ಥಿಗಳ ಎಫ್.ಎ–1 ಆಧರಿಸಿ ಕಲಿಕಾ ಪ್ರಗತಿ ಮತ್ತು ಆಪ್ತ ಸಮಾಲೋಚನಾಂಶಗಳನ್ನು ಚರ್ಚಿಸುವುದು ಹಾಗೂ ಉತ್ತರ ಪತ್ರಿಕೆಗಳನ್ನು/ ಪ್ರಾಜೆಕ್ಟ್ ವರ್ಕ್ಸ್‌ಗಳನ್ನು ಸಿ.ಸಿ.ಇ. ಅಡಿ ನಿರ್ವಹಿಸಿದ ಚಟುವಟಿಕೆಗಳ ಪ್ರಗತಿಯನ್ನು ವಿದ್ಯಾರ್ಥಿಗಳಿಗೆ ಪೋಷಕರ ಸಮ್ಮುಖದಲ್ಲಿ ನೀಡಿ ಚರ್ಚಿಸುವುದು ಹಾಗೂ ಮಾದರಿ ಉತ್ತರ ಪತ್ರಿಕೆಗಳನ್ನು / ಚಟುವಟಿಕೆಗಳನ್ನು ಪ್ರದರ್ಶಿಸಿ ಪ್ರೇರೇಪಿಸುವುದು. |
| 28.07.2023 ರಿಂದ 31.07.2023 | **ಸಿ.ಸಿ.ಇ ಚಟುವಟಿಕೆ–2 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಪಠ್ಯೇತರ ಚಟುವಟಿಕೆಗಳು** | ಶಾಲಾ/ ಕ್ಲಸ್ಟರ್/ ಹೋಬಳಿ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಜ್ಞಾನಗೋಷ್ಠಿ, ವಿಜ್ಞಾನ ನಾಟಕ ತಾಯಂದಿರ ಸಭೆ ಹಾಗೂ ವಿದ್ಯಾರ್ಥಿಗಳ ಆಪ್ತಸಮಾಲೋಚನಾ ಸಭೆಗಳ ನಿರ್ವಹಣೆ |
| | **ಆಗಸ್ಟ್–2023** | |
| 01.08.2023 ರಿಂದ ಪ್ರಾರಂಭ | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 15 ಪಠ್ಯ ವಸ್ತು ಬೋಧನೆ** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 15ರಷ್ಟು ಪಠ್ಯ ವಸ್ತು ಬೋಧನೆಯನ್ನು 1 ರಿಂದ 10ನೇ ತರಗತಿಗಳಿಗೆ ನಿರ್ವಹಿಸುವುದು. |
| 15.08.2023 | **ಸ್ವಾತಂತ್ರ್ಯ ದಿನಾಚರಣೆ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |

| | | |
|---|---|---|
| 15.08.2023 ರಿಂದ 30.08.2023 | **ಗುರು ಸ್ಪಂದನ ಕಾರ್ಯಕ್ರಮ.** | ಸರ್ಕಾರಿ ಪ್ರಾಥಮಿಕ / ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಸೇವಾ ಸೌಲಭ್ಯಗಳ ಇತ್ಯರ್ಥಕ್ಕಾಗಿ ಸೇವಾ ಅದಾಲತ್– ಅರ್ಥಾತ್ ಗುರುಸ್ಪಂದನ ಕಾರ್ಯಕ್ರಮ ಆಯೋಜಿಸಿ ಸ್ಥಳದಲ್ಲೇ ಆದೇಶಗಳನ್ನು ನೀಡುವುದರೊಂದಿಗೆ ಅರ್ಥಪೂರ್ಣವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲು ಸಿದ್ಧತೆ ಮಾಡಿಕೊಳ್ಳುವುದು. |
| 18.08.2023 ರಿಂದ 19.08.2023 | **ತಾಲ್ಲೂಕು ಮಟ್ಟದ ಕ್ರೀಡಾಕೂಟ** | ಕಡ್ಡಾಯವಾಗಿ ನಿಗಧಿತ ದಿನಾಂಕದೊಳಗೆ ಆಯೋಜಿಸಿ ಪೂರ್ಣಗೊಳಿಸುವುದು. |
| 20.08.2023 | **ರಾಷ್ಟ್ರೀಯ ಸದ್ಭಾವನಾ ದಿನಾಚರಣೆ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ರಾಷ್ಟ್ರೀಯ ಸದ್ಭಾವನಾ ದಿನಾಚರಣೆಯ ಮಹತ್ವ ತಿಳಿಸುವುದು. |
| 29.08.2023 | **ರಾಷ್ಟ್ರೀಯ ಕ್ರೀಡಾ ದಿನ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ರಾಷ್ಟ್ರೀಯ ಕ್ರೀಡಾ ದಿನದ ಮಹತ್ವ ತಿಳಿಸುವುದು. |
| 30.08.2023 ರಿಂದ 31.08.2023 | **ಸಿ.ಸಿ.ಇ ಚಟುವಟಿಕೆ–3 ನಿರ್ವಹಿಸುವುದು. (Project work)** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಪಠ್ಯೇತರ ಚಟುವಟಿಕೆ** | ತಾಲ್ಲೂಕು ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಇತರೆ ಸ್ಪರ್ದೆಗಳು |
| | **ಸೆಪ್ಟೆಂಬರ್–2023** | |
| 01.09.2023 ರಿಂದ ಪ್ರಾರಂಭ. | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ (1 ರಿಂದ 3ನೇ ತರಗತಿಗೆ ಶೇ 15ರಷ್ಟು) 4 ರಿಂದ 10ನೇ ತರಗತಿಗೆ ಶೇ 10 ಪಠ್ಯ ವಸ್ತು ಬೋಧನೆ** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ಬೋಧನೆಯನ್ನು 1 ರಿಂದ 3ನೇ ತರಗತಿಯ ಎಲ್ಲಾ ಮಕ್ಕಳಿಗೆ ಕೈಗೊಳ್ಳುವುದು.<br><br>ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ 10 ಪಠ್ಯ ವಸ್ತು ಬೋಧನೆಯನ್ನು 4 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಕೈಗೊಳ್ಳುವುದು. |
| 05.09.2023 | **ಶಿಕ್ಷಕರ ದಿನಾಚರಣೆ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು (ಸೂಚನೆ–5 ಅನ್ನು ಗಮನಿಸಿ). |
| 06.09.2023 ಮತ್ತು | **ಎರಡನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ–2)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. ನಿಗದಿತ ಅವಧಿಯಲ್ಲಿ ಈ ಮೌಲ್ಯಮಾಪನ ಪೂರ್ಣಗೊಳಿಸುವುದು. (ದಿನಾಂಕ: 21.07.2023 ರಿಂದ 04.09.2023 ರ ವರೆಗಿನ ಪಾಠ ಬೋಧನೆ ಆಧರಿಸಿ ನಿರ್ವಹಿಸುವುದು. |
| 08.09.2023 | **ಅಂತರಾಷ್ಟ್ರಿಯ ಸಾಕ್ಷರತಾ ದಿನಾಚರಣೆ** | ರಾಷ್ಟ್ರ ಮತ್ತು ರಾಜ್ಯ ಹಂತದ ಸಾಕ್ಷರತಾ ಪ್ರಮಾಣದ ಬಗ್ಗೆ ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವ ಮೂಲಕ ಸಾಕ್ಷರತೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು.<br>ವಿದ್ಯಾರ್ಥಿಗಳಿಂದ ಅನಕ್ಷರಸ್ತರನ್ನು ಸಾಕ್ಷರಸ್ತರನ್ನಾಗಿ ಮಾಡಿಸುವುದು. |
| 15.09.2023 | **ಸರ್.ಎಂ. ವಿಶ್ವೇಶ್ವರಯ್ಯನವರ ದಿನಾಚರಣೆ** | ಸರ್.ಎಂ. ವಿಶ್ವೇಶ್ವರಯ್ಯನವರು ನಾಡಿಗೆ ನೀಡಿದ ಕೊಡುಗೆ ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು. |
| 16.09.2023 | **ವಿಶ್ವ ಓಜೋನ್ ದಿನ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ವಿಶ್ವ ಓಜೋನ್ ದಿನದ ಮಹತ್ವ ತಿಳಿಸುವುದು. |

| | | |
|---|---|---|
| 29.09.2023<br>ರಿಂದ<br>07.10.2023 | **(ಎಸ್.ಎ–1) ಮೊದಲನೆಯ ಸಂಕಲಾನಾತ್ಮಕ ಮೌಲ್ಯಮಾಪನವನ್ನು ನಿರ್ವಹಿಸುವುದು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಅರ್ಧವಾರ್ಷಿಕ ಪರೀಕ್ಷೆ** | ಸದರಿ ಮೌಲ್ಯಮಾಪನವನ್ನು ದಿನಾಂಕ: 15.06.2023 ರಿಂದ 25.09.2023 ರವರೆಗಿನ ಎಲ್ಲಾ ಬೋಧನಾಂಶಗಳನ್ನು ಆಧರಿಸಿ 1 ರಿಂದ 9 ನೇ ತರಗತಿಗಳ ಎಲ್ಲಾ ವಿದ್ಯಾರ್ಥಿಗಳಿಗೆ ನಿರ್ವಹಿಸುವುದು.<br><br>ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಮೇಲ್ಕಂಡಂತೆ ದಿನಾಂಕ:15.06.2023 ರಿಂದ 25.09.2023ರ ವರೆಗಿನ ಬೋಧನಾಂಶಗಳನ್ನು ಆಧರಿಸಿ ಅರ್ಧವಾರ್ಷಿಕ ಪರೀಕ್ಷೆ ನಡೆಸುವುದು. |
| | **ಸಿ.ಸಿ.ಇ ಚಟುವಟಿಕೆ–4 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ಭಾಗ–ಬಿ ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಅಕ್ಟೋಬರ್–2023** | |
| 02.10.2023 | **ಮಹಾತ್ಮ ಗಾಂಧಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿ** | ಮಹಾತ್ಮ ಗಾಂಧಿಯವರ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಸರಳ ಜೀವನದ ಪರಿಚಯ, ಶ್ರಮದಾನ ಹಾಗೂ ಭಜನೆ ಮೂಲಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು |
| 29.09.2023<br>ರಿಂದ<br>07.10.2023 | **(ಎಸ್.ಎ–1) ಸಂಕಲಾನಾತ್ಮಕ ಮೌಲ್ಯಮಾಪನ ನಿರ್ವಹಿಸುವುದು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಅರ್ಧವಾರ್ಷಿಕ ಪರಿಕ್ಷೆ** | ಸದರಿ ಮೌಲ್ಯಮಾಪನವನ್ನು ದಿನಾಂಕ: 15.06.2023 ರಿಂದ 25.09.2023 ರವರೆಗಿನ ಎಲ್ಲಾ ಬೋಧನಾಂಶಗಳನ್ನು ಆಧರಿಸಿ 1 ರಿಂದ 9 ನೇ ತರಗತಿಗಳ ಎಲ್ಲಾ ವಿದ್ಯಾರ್ಥಿಗಳಿಗೆ ನಿರ್ವಹಿಸುವುದು.<br><br>ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಮೇಲ್ಕಂಡಂತೆ ದಿನಾಂಕ:15.06.2023 ರಿಂದ 25.09.2023ರ ವರೆಗಿನ ಬೋಧನಾಂಶಗಳನ್ನು ಆಧರಿಸಿ ಅರ್ಧವಾರ್ಷಿಕ ಪರೀಕ್ಷೆ ನಡೆಸುವುದು. |
| 08.10.2023<br>ರಿಂದ<br>24.10.2023 | **ದಸರಾ ರಜೆ** | ರಜೆಯಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಕುರಿತು ಅಧ್ಯಯನ ಮಾಡಿಕೊಳ್ಳಲು ಸೂಚಿಸಿ ದಿನಾಂಕ: 08.10.2023 ರಿಂದ 24.10.2023 ರವರೆಗೆ ದಸರಾ ರಜೆ ನೀಡುವುದು. |
| 25.10.2023<br>ರಿಂದ<br>29.10.2023 | **ಪುನರಾವರ್ತನೆ** | ಪಾಠ ಹಂಚಿಕೆಯಲ್ಲಿ ನಿಗಧಿಪಡಿಸಿದಂತೆ ದಿನಾಂಕ: 15.06.2023 ರಿಂದ 25.09.2023 ರವರೆಗೆ ನಿರ್ವಹಿಸಿದ ಪಾಠಗಳ ಪುನರಾವರ್ತನೆಯನ್ನು ನಿರ್ವಹಿಸುವುದು. |
| 25.10.2023<br>ರಿಂದ<br>27.10.2023 | **ಜಿಲ್ಲಾ ಮಟ್ಟದ ಕ್ರೀಡಾ ಕೂಟ** | ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು. |
| 28.10.2023 | **ಮಹರ್ಷಿ ವಾಲ್ಮೀಕಿ ಜಯಂತಿ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ಮಹರ್ಷಿ ವಾಲ್ಮೀಕಿ ಜಯಂತಿಯ ಮಹತ್ವ ತಿಳಿಸುವುದು. |
| 30.10.2023<br><br>31.10.2023 | **ಮೊದಲನೆಯ ಸಮುದಾಯದತ್ತ ಶಾಲೆ (ತಾಯಂದಿರ / ಪೋಷಕರ ಸಭೆ) [ಪ್ರಾಥಮಿಕ ಶಾಲಾ ವಿಭಾಗ]**<br><br>**ಮೊದಲನೆಯ ಸಮುದಾಯದತ್ತ ಶಾಲೆ (ತಾಯಂದಿರ /** | 1. ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ(ಎಸ್.ಎ–1) ರ ಹಾಗೂ ಎಸ್.ಎಸ್.ಎಲ್.ಸಿ ಅರ್ಧ ವಾರ್ಷಿಕ ಪರೀಕ್ಷೆಯ ಫಲಿತಾಂಶಗಳನ್ನು ಸಿದ್ಧಪಡಿಸಿಕೊಳ್ಳುವುದು.<br>2. ಶಾಲೆಯ ಪ್ರತಿ ವಿದ್ಯಾರ್ಥಿಯ ಕೃತಿ ಸಂಪುಟ (Child Profile)ವನ್ನು ಸಿದ್ಧಪಡಿಸಿಕೊಳ್ಳುವುದು.<br>3. ಮುಖ್ಯ ಶಿಕ್ಷಕರು ಮೊದಲನೆಯ ಸಮುದಾಯದತ್ತ ಶಾಲೆ ದಿನಾಂಕದ ಬಗ್ಗೆ ಹಾಗೂ ಕಾರ್ಯಕ್ರಮಕ್ಕೆ ಹಾಜರಾಗುವಂತೆ ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಸಾಕಷ್ಟು ಮುಂಚಿತವಾಗಿ ಜ್ಞಾಪನವನ್ನು ನೀಡುವುದು.<br>4. ಆಯಾ ತರಗತಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪೋಷಕರ ಮನವೊಲಿಸಿ ತಪ್ಪದೇ ಮೊದಲನೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕೆ ಹಾಜರಾಗಲು |

| | | |
|---|---|---|
| | **ಪೋಷಕರ ಸಭೆ)**<br>**[ಪ್ರೌಢ ಶಾಲಾ ವಿಭಾಗ]**<br>**(OPEN HOUSE)** | ಪ್ರೇರೇಪಿಸುವುದು.<br>5. ಶಿಕ್ಷಕರು, ಪೋಷಕರಿಗೆ ಮಕ್ಕಳ ಕೃತಿ ಸಂಪುಟವನ್ನು ತೋರಿಸಿ, ಅವರ ಕಲಿಕಾ ಪ್ರಗತಿಯನ್ನು FA-1, FA-2 ಹಾಗೂ SA-1 ಹಾಗೂ CCE ಅಡಿ ಭಾಗ-2ರ ಪ್ರಗತಿ ಸಂಗ್ರಹಿಸಿಟ್ಟು ವಿವರಿಸುವುದು. ಮನೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಲಿಕಾ ಪರಿಸರವನ್ನು ಒದಗಿಸಿಕೊಡುವಂತೆ ತಿಳಿಸುವುದು.<br>6. ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಎಸ್.ಡಿ.ಎಂ.ಸಿ ಸಮ್ಮುಖದಲ್ಲಿ ಶಾಲೆಯ ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶದ ಬಗ್ಗೆ ಚರ್ಚಿಸುವುದು. ಫಲಿತಾಂಶವನ್ನು ಆಧರಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವುದು.<br>7. ವಿಶೇಷವಾಗಿ 5ನೇ ತರಗತಿ ಹಾಗೂ 8ನೇ ತರಗತಿ ಮತ್ತು ಹತ್ತನೆ ತರಗತಿಗೆ ಸಂಬಂಧಿಸಿದಂತೆ ಎಲ್ಲಾ ಮಕ್ಕಳ ಪೋಷಕರು ಮೊದಲನೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು ಈ ಪೋಷಕರ ಪ್ರತ್ಯೇಕ ಸಭೆ ನಡೆಸಿ ಮಕ್ಕಳ ಕಲಿಕೆಗೆ ಪೂರಕವಾದ ಕಲಿಕಾ ವಾತಾವರಣ ಮನೆಯಲ್ಲಿ ನೀಡುವಂತೆ ಮನವೊಲಿಸುವುದು, ಸೂಕ್ತ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಅವಧಿ **(OPEN HOUSE)** ನಿರ್ವಹಣೆ. |
| 31.10.2023 | **ರಾಷ್ಟ್ರೀಯ ಸಂಕಲ್ಪ ದಿನ** | ಇಲಾಖಾ ಮಾರ್ಗಸೂಚಿಯಂತೆ ಕ್ರಮವಹಿಸುವುದು. |
| | **ಪಠ್ಯೇತರ ಚಟುವಟಿಕೆಗಳು** | **ದಿನಾಂಕ: 08.10.2023 ರಿಂದ 24.10.2023 ರವರಗೆ ದಸರಾ ರಜೆ**<br>ದಿನಾಂಕ:25.10.2023 ರಿಂದ 31.10.2023 ರವರೆಗೆ ಜಿಲ್ಲಾ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಇತರೆ ಕಾರ್ಯಕ್ರಮಗಳನ್ನು ಆಯೋಜಿಸುವುದು.<br>ಸಮುದಾಯದತ್ತ ಶಾಲೆ ಕಾರ್ಯಕ್ರಮ |
| | **ನವಂಬರ್-2023** | |
| 01.11.2023 | **ಕನ್ನಡ ರಾಜ್ಯೋತ್ಸವ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| 02.11.2023 ರಿಂದ ಪ್ರಾರಂಭ. | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ 15 (1–9) ಮತ್ತು ಶೇ 20 (5,8,10) ಪಠ್ಯ ವಸ್ತು ಬೊಧನೆ** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ 1–9 ನೇ ತರಗತಿಗಳಿಗೆ ಶೇ. 15 ರಷ್ಟು ಹಾಗೂ 5, 8 ಮತ್ತು 10ನೇ ತರಗತಿಗಳಿಗೆ ಶೇ. 20 ರಷ್ಟು ಪಠ್ಯ ವಸ್ತು ಬೊಧನೆ ಕೈಗೊಳ್ಳುವುದು. |
| 04.11.2023 ರಿಂದ 06.11.2023 | **ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ** | ಶಾಲೆ/ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಮತ್ತು ಪಾಲ್ಗೊಳ್ಳುವುದು. |
| 10.11.2023 | **ರಾಜ್ಯಮಟ್ಟದ ಕ್ರೀಡಾಕೂಟ** | ಸದರಿ ದಿನಾಂಕದ ಒಳಗೆ ಈ ಚಟುವಟಿಕೆಗಳನ್ನು ಇಲಾಖಾ ಮಾರ್ಗಸೂಚಿಯಂತೆ ಪೂರ್ಣಗೊಳಿಸುವುದು. |
| 13.11.2023 | **ರಾಷ್ಟ್ರೀಯ ಶಿಕ್ಷಣ ದಿನ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ಮೌಲಾನಾ ಅಬುಲ್ ಕಲಾಂ ಆಜಾದ್ ಜಯಂತಿ / ರಾಷ್ಟ್ರೀಯ ಶಿಕ್ಷಣ ದಿನದ ಮಹತ್ವ ತಿಳಿಸುವುದು. |
| 14.11.2023 | **ಮಕ್ಕಳ ದಿನಾಚರಣೆ** | ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ಮಕ್ಕಳ ಅಭಿವ್ಯಕ್ತಿ ಹಾಗೂ ಭಾಗವಹಿಸುವಿಕೆಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. |
| 19.11.2023 ರಿಂದ 25.11.2023 | **ರಾಷ್ಟ್ರೀಯ ಭಾವೈಕ್ಯತಾ ಕಾರ್ಯಕ್ರಮ / ರಾಷ್ಟ್ರೀಯ ಐಕ್ಯತಾ ಸಪ್ತಾಹ.** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ರಾಷ್ಟ್ರೀಯ ಭಾವೈಕ್ಯತಾ ಕಾರ್ಯಕ್ರಮ / ರಾಷ್ಟ್ರೀಯ ಐಕ್ಯತಾ ಸಪ್ತಾಹದ ಮಹತ್ವ ತಿಳಿಸುವುದು. |
| 20.11.2023 ರಿಂದ 30.11.2023 ರವರೆಗೆ. | **ಸ್ಪಂದನಾ ಕಾರ್ಯಕ್ರಮ.** | ಕ್ಲಸ್ಟರ್ / ತಾಲ್ಲೂಕು / ಜಿಲ್ಲಾವಾರು ಖಾಸಗಿ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಸಭೆಗಳನ್ನು ಆಯೋಜಿಸಿ, ಖಾಸಗಿ ಶಾಲೆಗಳ ಆಡಳಿತಾತ್ಮಕ ಸೇವೆಗಳ ಅದಾಲತ್ ಏರ್ಪಡಿಸಿ, ಬಾಕಿ ಕಡತಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಿ ಆದೇಶಿಸುವ ಕಾರ್ಯಕ್ರಮವಾಗಿದ್ದು, ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿ ಆಯೋಜಿಸಿ ನಿರ್ವಹಿಸುವುದು. |

a

| | | |
|---|---|---|
| 26.11.2023 | **ಸಂವಿಧಾನ ದಿನಾಚರಣೆ** | ಸಂವಿಧಾನದ ಪ್ರಾಮುಖ್ಯತೆ, ನಾಗರೀಕರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಹಾಗೂ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು. |
| 28.11.2023 | **ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ** | ತಾಲ್ಲೂಕು ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಮತ್ತು ಪಾಲ್ಗೊಳ್ಳುವುದು. |
| 29.11.2023 | **ಸಿ.ಸಿ.ಇ ಚಟುವಟಿಕೆ-5 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| 30.11.2023 | **ಕನಕದಾಸ ಜಯಂತಿ** | ಪ್ರಾರ್ಥನಾ ಸಮಯವನ್ನು ಮಾತ್ರ ಬಳಸಿಕೊಂಡು ಕನಕದಾಸ ಜಯಂತಿಯ ಮಹತ್ವ ತಿಳಿಸುವುದು. |
| **ಪಠ್ಯೇತರ ಚಟುವಟಿಕೆ** | ವಿಭಾಗ/ರಾಜ್ಯ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ದೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಶಾಲೆ/ಕ್ಲಸ್ಟರ್ ಹಾಗೂ ತಾಲ್ಲುಕು ಮಟ್ಟದ ಪ್ರತಿಭಾ ಕಾರಂಜಿ ಯುವ ಸಂಸತ್ ಕಾರ್ಯಕ್ರಮ | **ಪಠ್ಯೇತರ ಚಟುವಟಿಕೆ** |
| | **ಡಿಸೆಂಬರ್-2023** | |
| 01.12.2023 ರಿಂದ ಪ್ರಾರಂಭ. | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 15 (1 ರಿಂದ 3) ಹಾಗೂ (4,6,7,9) ಪಠ್ಯ ವಸ್ತು ಬೊಧನೆ ಹಾಗೂ ಶೇ. 20 (5,8 ಮತ್ತು 10ನೇ ತರಗತಿ)** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ **1 ರಿಂದ 3 ಹಾಗೂ 4,6,7,9 ನೇ ತರಗತಿಗಳಿಗೆ ಶೇ. 15 ರಷ್ಟು ಪಠ್ಯ ವಸ್ತು ಬೊಧನೆ ಮತ್ತು 5,8 ಮತ್ತು 10ನೇ ತರಗತಿಗಳಿಗೆ ಶೇ 20 ರಷ್ಟು** ಪಠ್ಯ ಬೋಧನೆ ನಿರ್ವಹಿಸುವುದು. |
| 01.12.2023 | **ವಿಶ್ವ ಏಡ್ಸ್ ದಿನಾಚರಣೆ** | ವಿಶ್ವ ಏಡ್ಸ್ ದಿನಾಚರಣೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು |
| 03.12.2023/04 .12.2023 | **ವಿಶ್ವ ವಿಕಲಚೇತನರ ದಿನಾಚರಣೆ** | ಸಮನ್ವಯ ಶಿಕ್ಷಣ ಪರಿಕಲ್ಪನೆಯ ಅರಿವು ಮೂಡಿಸುವುದು. |
| 12.12.2023 ರಿಂದ 13.12.2023 | **ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮ** | ಜಿಲ್ಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಹಾಗೂ ತಾಲ್ಲೂಕು ಹಂತದಲ್ಲಿ ಅರ್ಹ/ ಆಯ್ಕೆಯಾದ ವಿದ್ಯಾರ್ಥಿಗಳು ಪಾಲ್ಗೊಳ್ಳುವುದು. |
| 22.12.2023 | **ರಾಷ್ಟ್ರೀಯ ಗಣಿತ ದಿನ** | ಮೆಟ್ರಿಕ್ ಮೇಳ, ನಿತ್ಯ ಜೀವನದಲ್ಲಿ ಗಣಿತದ ಬಳಕೆ, ಗಣಿತ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಇವೆ ಮುಂತಾದ ವಿಷಯಗಳ ಬಗ್ಗೆ ವಿಚಾರಗೋಷ್ಠಿ, ಚರ್ಚಾಸ್ಪರ್ಧೆಗಳನ್ನು ಶಾಲೆಯಲ್ಲಿ ಏರ್ಪಡಿಸಿ ಈ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು. |
| 26.12.2023 | **ಅಣಕು ಸಂಸತ್ತು ಸ್ಪರ್ಧೆ ಸಿ.ಸಿ.ಇ** | ಅಣಕು ಸಂಸತ್ತಿನ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ನಿಟ್ಟಿನಲ್ಲಿ ಶಾಲಾ ಹಂತದಲ್ಲಿ ಅಣುಕು ಸಂಸತ್ತು ಸ್ಪರ್ಧೆ ಏರ್ಪಡಿಸುವುದು. |

| | | |
|---|---|---|
| 26.12.2023 ರಿಂದ 28.12.2023 | **ಮೂರನೇ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ-3)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ದಿನಾಂಕ:01.11.2023ರಿಂದ 25.12.2023 ರವರೆಗೆ ಬೋಧಿಸಿದ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. |
| 30.12.2023 | **ಸಿ.ಸಿ.ಇ ಚಟುವಟಿಕೆ-6 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| 01.12.2023 ರಿಂದ 31.12.2023 ರ ಒಳಗೆ | **ಶಾಲಾ ವಾರ್ಷಿಕೋತ್ಸವ ಮತ್ತು ಶೈಕ್ಷಣಿಕ ಪ್ರವಾಸಗಳನ್ನು ನಿರ್ವಹಿಸುವುದು.** | **ಶಾಲಾ ವಾರ್ಷಿಕೋತ್ಸವ ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಪ್ರಸಕ್ತ ಶೈಕ್ಷಣಿಕ ಸಾಲಿನ ಡಿಸೆಂಬರ್ ಮಾಹೆಯೊಳಗಾಗಿ ಒಂದು ದಿನ ಶಾಲಾ ವಾರ್ಷಿಕೋತ್ಸವ ಮತ್ತು ಶೈಕ್ಷಣಿಕ ಪ್ರವಾಸವನ್ನು ಅಗತ್ಯಾನುಸಾರ ನಿರ್ವಹಿಸುವುದು.ನಂತರದಲ್ಲಿ ಅವಕಾಶವನ್ನು ನಿರ್ಬಂಧಿಸಿದೆ.** |
| | **ಪಠ್ಯೇತರ ಚಟುವಟಿಕೆಗಳು** | ಪ್ರತಿಭಾ ಕಾರಂಜಿ ಹಾಗೂ ಯುವಸಂಸತ್ ಕಾರ್ಯಕ್ರಮ ಆಯೋಜನೆ |
| | **ಜನವರಿ-2024** | |
| 01.01.2024 ರಿಂದ ಪ್ರಾರಂಭ. | **ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ. 15 (1 ರಿಂದ 3) ಶೇ 15 (4,6,7,9) ಪಠ್ಯ ವಸ್ತು ಬೊಧನೆ ಹಾಗೂ ಶೇ 10 (5,8 ಮತ್ತು 10ನೇ ತರಗತಿ)** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ 1 ರಿಂದ 3 ಹಾಗೂ 4,6,7,9 ನೇ ತರಗತಿಗಳಿಗೆ ಶೇ. 15 ರಷ್ಟು ಪಠ್ಯ ವಸ್ತು ಬೊಧನೆ ಹಾಗೂ 5,8 ಮತ್ತು 10ನೇ ತರಗತಿಗಳಿಗೆ ಶೇ. 10 ರಷ್ಟು ಪಠ್ಯ ಬೋಧನೆ ನಿರ್ವಹಿಸುವುದು. |
| 03.01.2024 | **ಮಾತೆ ಸಾವಿತ್ರಿ ಬಾಯಿ ಫುಲೆ ಜಯಂತಿ** | ಶಾಲಾ ಪ್ರಾರ್ಥನಾ ಸಮಯದಲ್ಲಿ ದೇಶದ ಮೊದಲ ಮಹಿಳಾ ಶಿಕ್ಷಕಿ ಮಾತೆ ಸಾವಿತ್ರಿ ಬಾಯಿ ಫುಲೆಯವರ ಬಗ್ಗೆ ಮಕ್ಕಳಿಗೆ ತಿಳಿಸುವುದು. |
| 05.01.2024 ರಿಂದ 06.01.2024 | **ಅನುಭವ ಹಂಚಿಕೆ ಕಾರ್ಯಗಾರ (Expirience sharing programme)** | ಮುಖ್ಯ ಶಿಕ್ಷಕರು ತಮ್ಮ ಸಮೀಪದ ಶಾಲೆಗಳ ಆಯ್ದ ವಿಷಯ ಸಂಪನ್ಮೂಲ ಶಿಕ್ಷಕರನ್ನು ಶಾಲೆಗೆ ಆಹ್ವಾನಿಸಿ ಹೊಸದಾಗಿ ನೇಮಿಸಿಕೊಂಡ ಅನನುಭವಿ ಶಿಕ್ಷಕರೊಂದಿಗೆ ಪರಸ್ಪರ ಅನುಭವ ಹಂಚಿಕೊಂಡು ಬೋಧನೆಗಳ ಕುರಿತು ಮಾರ್ಗದರ್ಶನ ವಿನಿಮಯ ಮಾಡಿಕೊಳ್ಳುವುದು. |
| 12.01.2024 | **ಸ್ವಾಮಿವಿವೇಕಾನಂದರ ಜನ್ಮ ದಿನಾಚರಣೆ, ರಾಷ್ಟ್ರೀಯ ಯುವ ದಿನಾಚರಣೆ** | ದೇಶದ ಅಭಿವೃದ್ಧಿಯಲ್ಲಿ ಯುವಪೀಳಿಗೆಯ ಪಾತ್ರದ ಮಹತ್ವದ ಬಗ್ಗೆ ತಿಳಿಸುವುದು. |
| 16.01.2024 ರಿಂದ 20.01.2024 | **ಆಪ್ತ ಸಮಾಲೋಚನೆ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ಏರ್ಪಡಿಸುವುದು.** | ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ / ಕೌನ್ಸಿಲಿಂಗ್ ನಡೆಸುವುದರೊಂದಿಗೆ ಪರೀಕ್ಷೆ ಸಿದ್ಧತೆ ಹಾಗೂ ಕಲಿಕಾ ಸಾಮಗ್ರಿಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವುದು ಮತ್ತು ಇದಕ್ಕಾಗಿ ತಾಯಂದಿರ ಸಭೆ ನಿರ್ವಹಿಸುವುದು. |
| 25.01.2024 | **ರಾಷ್ಟ್ರೀಯ ಮತದಾರರ ದಿನ** | ಇ.ಎಲ್.ಸಿ ಕ್ಲಬ್‌ಗಳ ಮೂಲಕ ಮತದಾನದ ಮಹತ್ವದ ಬಗ್ಗೆ ತಿಳಿಸುವುದು. |
| 26.01.2024 | **ಗಣರಾಜ್ಯ ದಿನಾಚರಣೆ** | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| 20.01.2024 ರಿಂದ 28.01.2024ರ ವರೆಗೆ | **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಸರಣಿ ಪರೀಕ್ಷೆ** | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಸ್ಥಳೀಯವಾಗಿ ಸರಣಿ ಪರೀಕ್ಷೆ ನಿರ್ವಹಣೆ ಮತ್ತು ವಿಶ್ಲೇಷಣೆ |

| | | |
|---|---|---|
| 30.01.2024 | **ಹುತಾತ್ಮರ ದಿನಾಚಾರಣೆ ಹಾಗೂ ಪೋಷಕರ ಸಭೆ** | ಮಹಾತ್ಮ ಗಾಂಧೀಜಿಯವರ ಉದಾತ್ತ ಧ್ಯೇಯದ ಬಗ್ಗೆ ತಿಳಿಸುವುದು ಹಾಗೂ ಪೋಷಕರ/ ತಾಯಂದಿರ ಸಭೆ ಕರೆದು ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಮತ್ತು ಆಪ್ತ ಸಮಾಲೋಚನಾಂಶಗಳನ್ನು ಚರ್ಚಿಸುವುದು ಹಾಗೂ ಉತ್ತರ ಪತ್ರಿಕಗಳನ್ನು/ ಪ್ರಾಜೆಕ್ಟ್ ವರ್ಕ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು. |
| 31.01.2024 | **ಸಿ.ಸಿ.ಇ ಚಟುವಟಿಕೆ–7 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| | **ಫೆಬ್ರವರಿ–2024** | |
| 01.02.2024 ರಿಂದ ಪ್ರಾರಂಭ. | **ವಾರ್ಷಿಕ ಪಾಠ ಹಂಚಿಕೆಯಲ್ಲಿ ನಿಗಧಿಪಡಿಸಿದಂತೆ ಶೇ5ರಷ್ಟು 1 ರಿಂದ 9ನೇ ತರಗತಿವರೆಗೆ ನಿರ್ವಹಿಸುವುದು.**<br><br>**ಪುನರಾವರ್ತನೆ.** | ವಾರ್ಷಿಕ ಪಾಠ ಹಂಚಿಕೆ ಯೋಜನೆಯಲ್ಲಿ ನಿಗಧಿಪಡಿಸಿದಂತೆ ಶೇ 5 ರಷ್ಟು 1 ರಿಂದ 9ನೇ ತರಗತಿಗಳಿಗೆ ಪಠ್ಯ ವಸ್ತು ಬೋಧನೆ ನಿರ್ವಹಿಸುವುದು. ಪುನರಾವರ್ತನೆ ನಿರ್ವಹಿಸುವುದು. ತದನಂತರ ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಂಡ ಪಠ್ಯವಸ್ತುವಿನ ಪುನರಾವರ್ತನೆ ಮಾಡುವುದರೊಂದಿಗೆ ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಪಡಿಸುವುದು. |
| 04.02.2024 ರಿಂದ 06.02.2024 | **ನಾಲ್ಕನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ–4)** | ಸದರಿ ಮೌಲ್ಯಮಾಪನದ ವಿಶಿಷ್ಟತೆಯನ್ನು ಅರ್ಥೈಸಿಕೊಂಡು ಆಯಾ ಬೋಧನಾ ಅವಧಿಯಲ್ಲಿ ವಿಷಯವಾರು ಮೌಲ್ಯಮಾಪನ ಹಮ್ಮಿಕೊಳ್ಳುವುದು. (ದಿನಾಂಕ:29.12.2023 ರಿಂದ 31.01.2024 ರವರೆಗಿನ ಪಾಠಗಳನ್ನು ಆಧರಿಸಿದಂತೆ) |
| 20.02.2024 ರಿಂದ 26.02.2024 | **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಸರಣಿ ಪರೀಕ್ಷೆ .**<br><br>**5 ಮತ್ತು 8ನೇ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರಿಪರೇಟರಿ ಮೌಲ್ಯಾಂಕನ ಪರೀಕ್ಷೆ ನಿರ್ವಹಿಸುವುದು.** | ಈವರೆಗೆ ಪೂರ್ಣಗೊಂಡಿರುವ ಪಠ್ಯವಸ್ತುವನ್ನಾಧರಿಸಿ ವಾರ್ಷಿಕ ಪರೀಕ್ಷೆಗೆ ಪೂರ್ವ ತಯಾರಿಗಾಗಿ ಸರಣಿ ಪರೀಕ್ಷೆಯನ್ನು (Preparatory Exam) ನಿರ್ವಹಿಸುವುದು.(ವಾರ್ಷಿಕ ಪಠ್ಯ ವಸ್ತುವನ್ನಾಧರಿಸಿದಂತೆ ಸರಣಿ ಪರೀಕ್ಷೆ ನಿರ್ವಹಿಸುವುದು)<br><br>ಶಾಲಾ ಹಂತದಲ್ಲಿ ಮಾದರಿ ಪ್ರಶ್ನೆ ಪತ್ರಿಕೆಯನ್ನಾಧರಿಸಿ ಪ್ರಿಪರೇಟರಿ ಪರೀಕ್ಷೆ ನಿರ್ವಹಿಸುವುದು. |
| 27.02.2024 | **ಸಿ.ಸಿ.ಇ ಚಟುವಟಿಕೆ–8 ನಿರ್ವಹಿಸುವುದು.** | ಸಿ.ಸಿ.ಇ ಅಡಿ ವಿದ್ಯಾರ್ಥಿಗಳಿಗೆ ಆಯಾ ಮಾಹೆಯಲ್ಲಿ ಮುಕ್ತಾಯವಾದ ಪಠ್ಯಾಧಾರಿತ ಚಟುವಟಿಕೆಯನ್ನು ಸಂಘಟಿಸಿ (ಚಟುವಟಿಕೆ ಬ್ಯಾಂಕ್‌ನ್ನು ಅನುಬಂಧಿಸಿದೆ) ತರಗತಿವಾರು/ವಿಷಯವಾರು ನಿರ್ವಹಿಸುವುದು. ಸದರಿ ಚಟುವಟಿಕೆಯನ್ನು ಸಿ.ಸಿ.ಇ ಅಡಿ ಕಲಿಕಾ ಪ್ರಗತಿಯನ್ನು ಪ್ರತ್ಯೇಕವಾಗಿ ದಾಖಲಿಸುವುದು. ಇದರಿಂದಾಗಿ ಆಯಾ ಮಾಹೆಯ ಬೋಧನಾಂಶಗಳ ಕಲಿಕಾ ಪ್ರಗತಿಯನ್ನು ಪುನಾರವರ್ತನೆಯೊಂದಿಗೆ ವಿಶ್ಲೇಷಿಸಿದಂತಾಗುತ್ತದೆ. |
| 28.02.2024 | **ರಾಷ್ಟ್ರೀಯ ವಿಜ್ಞಾನ ದಿನಾಚರಣೆ** | ಸರ್. ಸಿ.ವಿ.ರಾಮನ್‌ರವರನ್ನು ಒಳಗೊಂಡಂತೆ ಭಾರತದ ವಿಜ್ಞಾನಿಗಳು ವಿಜ್ಞಾನ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು. ಈ ದಿನದಂದು ಶಾಲೆಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ವಿಜ್ಞಾನದ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವುದು. |

| ಮಾರ್ಚ್–2024 | | |
|---|---|---|
| 01.03.2024 ರಿಂದ 07.03.2024 | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರಿಪರೇಟರಿ ಪರೀಕ್ಷೆಗಳು | ದಿ:01.03.2024ರಿಂದ 07.03.2024ರ ವರೆಗೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರಿಪರೇಟರಿ ಪರೀಕ್ಷೆಗಳು. (ವಾರ್ಷಿಕ ಪಠ್ಯವಸ್ತುವನ್ನಾಧರಿಸಿದಂತೆ) |
| | **ಪುನರಾವರ್ತನೆ** | ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಂಡ ಪಠ್ಯವಸ್ತುವಿನ ಪುನರಾವರ್ತನೆ ಮಾಡುವುದರೊಂದಿಗೆ ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಪಡಿಸುವುದು. |
| 08.03.2024 | **ವಿಶ್ವ ಮಹಿಳಾ ದಿನಾಚರಣೆ** | ಅರ್ಥಪೂರ್ಣವಾಗಿ ಆಚರಿಸುವುದು |
| 10.03.2024 ರಿಂದ 18.03.2024 | **5 ಮತ್ತು 8ನೇ ತರಗತಿಗಳಿಗೆ ಮೌಲ್ಯಾಂಕನ ಪರೀಕ್ಷೆ ನಿರ್ವಹಣೆ** | 5 ಮತ್ತು 8ನೇ ತರಗತಿಗಳ ವಿದ್ಯಾರ್ಥಿಗಳಿಗೆ ರಾಜ್ಯದಾದ್ಯಂತ ಏಕ ರೂಪದ ಮೌಲ್ಯಾಂಕನವನ್ನು ನಿರ್ವಹಿಸುವುದು.<br><br>5ನೇ ತರಗತಿಗೆ ದಿನಾಂಕ;01.11.2023 ರಿಂದ ದಿನಾಂಕ 28.02.2024 ರವರೆಗೆ ನಿರ್ವಹಿಸಿದ ಪಾಠಗಳ ಕುರಿತಂತೆ ಮೌಲ್ಯಾಂಕನ ನಿರ್ವಹಿಸುವುದು.<br><br>8 ನೇ ತರಗತಿಗೆ ವಾರ್ಷಿಕ ಪಾಠಗಳನ್ನಾಧರಿಸಿ ಮೌಲ್ಯಾಂಕನ ನಿರ್ವಹಣೆ ದಿನಾಂಕ:15.06.2023 ರಿಂದ 28.02.2024 ರವರೆಗೆ ನಿರ್ವಹಿಸಿದ ಪಾಠಗಳ ಕುರಿತಂತೆ ಮೌಲ್ಯಾಂಕನ ನಿರ್ವಹಿಸುವುದು. |
| 15.03.2024 ರಿಂದ 30.03.2024 | **ಶಾಲಾ ಹಂತದಲ್ಲಿ ಉಳಿದ ತರಗತಿಗಳಿಗೆ (1–9) SA-2 ನಿರ್ವಹಣೆ** | ಉಳಿದಂತೆ 1,2,3,4, ಮತ್ತು 6,7 ಹಾಗೂ 9 ನೇ ತರಗತಿಗಳಿಗೆ ಎಸ್.ಎ–2 ಪರೀಕ್ಷೆಯನ್ನು ಯಥಾಸ್ಥಿತಿ ನಿರ್ವಹಿಸುವುದು. ದಿನಾಂಕ: 01.11.2023 ರಿಂದ 28.02.2024 ರವರೆಗೆ ನಿರ್ವಹಿಸಿದ ಪಾಠಗಳ ಕುರಿತಂತೆ ಮೌಲ್ಯಾಂಕನ ನಿರ್ವಹಿಸುವುದು. |
| 19.03.2024 ರಿಂದ 22.03.2024 | **5, 8 ತರಗತಿಯ ಮೌಲ್ಯಾಂಕನ ಪರೀಕ್ಷೆಯ ಮೌಲ್ಯ ಮಾಪನ ಕಾರ್ಯ** | 19.03.2024 ರಿಂದ 22.03.2024 ರವರೆಗೆ ಮೌಲ್ಯ ಮಾಪನ ಕಾರ್ಯದಲ್ಲಿ ಭಾಗವಹಿಸಿ ಫಲಿತಾಂಶ ಸಿದ್ಧಪಡಿಸುವುದು. |
| 04.04.2024 | **ಮಹಾವೀರ ಜಯಂತಿ** | ಶಾಲಾ ಪ್ರಶಾಲೆಗಳಲ್ಲಿ ಮಹಾವೀರ ಜಯಂತಿಯನ್ನು ಆಯೋಜಿಸಿ ಆಚರಿಸುವುದು. |
| 23.03.2024 ರಿಂದ 05.04.2024 | **ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ** | 23.03.2024 ರಿಂದ 05.04.2024 ರವರೆಗೆ **ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳ ನಿರ್ವಹಣೆ. ಹಾಗೂ ಮೌಲ್ಯ ಮಾಪನಾ ಕಾರ್ಯ ನಿಗಧಿಪಡಿಸುವುದು.** |
| ಏಪ್ರಿಲ್–2024 | | |
| 01.04.2024 ರಿಂದ 05.04.2024 | **ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ** | 1 ರಿಂದ 9 ನೇ ತರಗತಿಯವರೆಗೆ (5 ಮತ್ತು 8 ನೇ ತರಗತಿ ಹೊರತುಪಡಿಸಿ) ಮಾರ್ಗಸೂಚಿಯಂತೆ ಸಂಕಲನಾತ್ಮಕ ಮೌಲ್ಯಾಂಕನ–2 (ಎಸ್.ಎ–2) ಮೌಲ್ಯಮಾಪನ ಕಾರ್ಯವನ್ನು ಪೂರ್ಣಗೊಳಿಸಿ ತದನಂತರ ಸಮಗ್ರವಾಗಿ ಫಲಿತಾಂಶ ಕ್ರೋಢಿಕರಿಸಿ, ಫಲಿತಾಂಶ ಪ್ರಕಟಣೆಗೆ ಎರಡನೆಯ ಸಮುದಾಯದತ್ತ ಶಾಲೆ ವೇಳೆಗೆ ಸಂಬಂಧಿಸಿದ ಶೈಕ್ಷಣಿಕ ಪ್ರಗತಿ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳುವುದು. |
| 06.04.2024 ರಿಂದ 13.04.2024ರ | **ಎಸ್.ಎಸ್.ಎಲ್.ಸಿ ಪರೀಕ್ಷೆ ಮೌಲ್ಯಮಾಪನ** | 06.04.2024 ರಿಂದ 13.04.2024 ರವರಗೆ **ಎಸ್.ಎಸ್.ಎಲ್.ಸಿ ಪರೀಕ್ಷೆ ಮೌಲ್ಯಮಾಪನ ನಿರ್ವಹಿಸುವುದು.** |

| | | |
|---|---|---|
| 07.04.2024/ 08.04.2024 | ವಿಶ್ವ ಆರೋಗ್ಯದ ದಿನಾಚರಣೆ | ಅರ್ಥಪೂರ್ಣವಾಗಿ ಆಚರಿಸುವುದು. |
| 08.04.2024 | ಎರಡನೆಯ ಸಮುದಾಯದತ್ತ ಶಾಲೆ (ಪ್ರಾಥಮಿಕ ಶಾಲಾ ವಿಭಾಗ) | 1. 1-7/8 ತರಗತಿಗಳ ವಿದ್ಯಾರ್ಥಿಗಳ ಫಲಿತಾಂಶ ಪ್ರಕ್ರಟಿಸುವುದು.<br>2. ಮುಂದಿನ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ದಿನದಿಂದಲೇ ಹಾಜರಾಗುವಂತೆ ಪ್ರೇರೇಪಿಸುವುದು.<br>3. ಶಾಲಾ ಪ್ರಾರಂಭದ ದಿನದಿಂದಲೇ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುವ ಬಗ್ಗೆ ಪೋಷಕರಿಗೆ ತಿಳಿಸುವುದು.<br>4. ರಜೆ ಅವಧಿಯಲ್ಲಿ ದಾಖಲಾತಿ ಪ್ರಕ್ರಿಯೆ ನಡೆಯುವ ಬಗ್ಗೆ ತಿಳಿಸುವುದು.<br>5. ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು, ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು, ಶಾಲಾ ಶೈಕ್ಷಣಿಕ ಯೋಜನೆಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದೊಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆಯುವುದು. |
| 10.04.2024 | ಎರಡನೆಯ ಸಮುದಾಯದತ್ತ ಶಾಲೆ (ಪ್ರೌಢಶಾಲಾ ವಿಭಾಗ) | 1. 8 ಮತ್ತು 9 ನೇ ತರಗತಿಗಳ ವಿದ್ಯಾರ್ಥಿಗಳ ಫಲಿತಾಂಶ ಪ್ರಕ್ರಟಿಸುವುದು.<br>2. ಮುಂದಿನ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ದಿನದಿಂದಲೇ ಹಾಜರಾಗುವಂತೆ ಪ್ರೇರೇಪಿಸುವುದು.<br>3. ಶಾಲಾ ಪ್ರಾರಂಭದ ದಿನದಿಂದಲೇ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುವ ಬಗ್ಗೆ ಪೋಷಕರಿಗೆ ತಿಳಿಸುವುದು.<br>4. ರಜೆ ಅವಧಿಯಲ್ಲಿ ದಾಖಲಾತಿ ಪ್ರಕ್ರಿಯೆ ನಡೆಯುವ ಬಗ್ಗೆ ತಿಳಿಸುವುದು.<br>5. ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು, ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು, ಶಾಲಾ ಶೈಕ್ಷಣಿಕ ಯೋಜನೆಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಮಂಡಿಸಿ, ಒಪ್ಪಿಗೆ ಪಡೆಯುವುದು. |
| 14.04.2024 | ಸಂವಿಧಾನ ಶಿಲ್ಪಿ ಡಾ॥ಬಿ.ಆರ್. ಅಂಬೇಡ್ಕರ್ ಜಯಂತಿ | ಅರ್ಥಪೂರ್ಣವಾಗಿ ಮತ್ತು ಕಡ್ಡಾಯವಾಗಿ ಆಚರಿಸುವುದು. |
| **ದಿನಾಂಕ: 11.04.2024 ರಿಂದ ದಿನಾಂಕ:28.05.2024 ರವರೆಗೆ ಬೇಸಿಗೆ ರಜೆ** | | |

## 2023-24 ನೇ ಸಾಲಿಗೆ ರಾಜ್ಯ ಪಠ್ಯಕ್ರಮದ ಶಾಲೆಗಳ ದೈನಂದಿನ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆಗೆ ಸಲಹಾತ್ಮಕ ವೇಳಾ ಪಟ್ಟಿ.

**ರಾಜ್ಯದ ಸರ್ಕಾರಿ / ಅನುದಾನಿತ / ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬೆಳಿಗ್ಗೆ 9.30 ಕ್ಕೆ ಶಾಲೆಗೆ ಹಾಜರಾಗುವುದು ಹಾಗೂ 9.30 ರಿಂದ 9.40 ರವರೆಗೆ ಪೂರ್ವ ತಯಾರಿ,9.40 ರಿಂದ 9.50 ರವರೆಗೆ ಪ್ರಾರ್ಥನೆ ಹಾಗೂ ಅಗತ್ಯಾನುಸಾರ 9.50 ರಿಂದ 10.00 ರವರೆಗೆ ಕ್ಷೀರ ಭಾಗ್ಯ ಯೋಜನೆಯಡಿ ಬಿಸಿ ಹಾಲನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ ದೈನಂದಿನ ಬೋಧನಾ ತರಗತಿಗಳನ್ನು ಕೆಳಕಂಡಂತೆ ಪ್ರಾರಂಭಿಸುವುದು.**

**ಪ್ರಾಥಮಿಕ ಶಾಲೆಗಳು (1 ರಿಂದ 7/8 ನೇ ತರಗತಿಗಳ)**

| ಅವಧಿ -1 | ಅವಧಿ -2 | ಅಲ್ಪ ವಿರಾವ ು | ಅವಧಿ -3 | ಅವಧಿ -4 | ಭೋಜನ ವಿರಾಮ | ಅವಧಿ -5 | ಅವಧಿ -6 | ಅಲ್ಪ ವಿರಾಮ | ಅವಧಿ-7 | ಅವಧಿ-8 |
|---|---|---|---|---|---|---|---|---|---|---|
| 10.00 ರಿಂದ 10.40 | 10.40 ರಿಂದ 11.20 | 11.20 ರಿಂದ 11.30 | 11.30 ರಿಂದ 12.10 | 12.10 ರಿಂದ 12.50 | 12.50 ರಿಂದ 1.30 | 1.30 ರಿಂದ 2.10 | 2.10 ರಿಂದ 2.50 | 2.50 ರಿಂದ 3.00 | 3.00 ರಿಂದ 3.40 | 3.40 ರಿಂದ 4.20 |

- **ನಲಿ-ಕಲಿ ತರಗತಿಗಳಲ್ಲಿ (1-3) ಪ್ರತಿದಿನ ತಲಾ 80 ನಿಮಿಷದ 04 ಅವಧಿಗಳನ್ನು ಮೇಲ್ಕಂಡ ವೇಳಾಪಟ್ಟಿಯಂತೆ ನಿರ್ವಹಿಸುವುದು.**

ಪ್ರೌಢ ಶಾಲೆಗಳು (8 ರಿಂದ 10 ನೇ ತರಗತಿಗಳ)

| ಅವಧಿ-1 | ಅವಧಿ-2 | ಅಲ್ಪ ವಿರಾಮ | ಅವಧಿ-3 | ಅವಧಿ-4 | ಭೋಜನ ವಿರಾಮ | ಅವಧಿ-5 | ಅವಧಿ-6 | ಅಲ್ಪ ವಿರಾಮ | ಅವಧಿ-7 |
|---|---|---|---|---|---|---|---|---|---|
| 10.00 ರಿಂದ 10.45 | 10.45 ರಿಂದ 11.30 | 11.30 ರಿಂದ 11.40 | 11.40 ರಿಂದ 12.25 | 12.25 ರಿಂದ 1.10 | 1.10 ರಿಂದ 1.55 | 1.55 ರಿಂದ 2.40 | 2.40 ರಿಂದ 3.25 | 3.25 ರಿಂದ 3.35 | 3.35 ರಿಂದ 4.20 |

- **ತರಗತಿವಾರು / ವಿಷಯವಾರು ಬೋಧನಾ ಅವಧಿಗಳ ಹಂಚಿಕೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.**

***ಸೂಚನೆಗಳು:***

*01.* **5 ಮತ್ತು 8 ನೇ ತರಗತಿಗಳ ಮೌಲ್ಯಾಂಕನ:-** ಕಳೆದ ಸಾಲಿನಲ್ಲಿ 5 ಮತ್ತ 8ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಿಸಿದ್ದು, ಪ್ರಸ್ತುತ 2023-24 ನೇ ಸಾಲಿನಲ್ಲಿ ಸದರಿ ಮೌಲ್ಯಾಂಕನವನ್ನು ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಕ್ರಮವಹಿಸಿ ಮಾರ್ಗದರ್ಶನ ನೀಡಲಾಗುವುದು. ಅದರಂತೆ ವಿದ್ಯಾರ್ಥಿಗಳಿಗೆ ಬೋಧನಾ-ಕಲಿಕಾ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಿರ್ವಹಿಸಿ, ಯಶಸ್ವಿಯಾಗಿ ಪಾಲ್ಗೊಳ್ಳಲು ಕ್ರಮವಹಿಸುವುದು.

*02.* **ವಿದ್ಯಾರ್ಥಿಗಳ ಸುರಕ್ಷತೆ:-** ಅಗತ್ಯಾನುಸಾರ ಸಿಸಿಇ ಮೌಲ್ಯಾಂಕನ ಚಟುವಟಿಕೆಗಳ ನಿರ್ವಹಣೆ ಸಂದರ್ಭದಲ್ಲಿ ಕೆಲವು ಚಟುವಟಿಕೆಗಳನ್ನು (ಪ್ರಾಜೆಕ್ಟ್ ವರ್ಕ್) ವಿದ್ಯಾರ್ಥಿಗಳ ಸುರಕ್ಷತೆ ಕುರಿತು ಅಂದರೆ, ಪೋಕ್ಸೋ ಕಾಯಿದೆ, ಆಟದ ಮೈದಾನ, ಶಾಲಾ ವಾತಾವರಣ, ಕಟ್ಟಡ ಸುರಕ್ಷತೆ, ವಾಹನ ಸಂಚಾರ, ಇತರೆಡೆಗಳಲ್ಲಿ ವಹಿಸಬೇಕಾದ ಎಚ್ಚರಿಕೆ ಅಂಶಗಳನ್ನು ಕುರಿತಂತೆ (for example What is good tuch and What is bad tuch ಎಂಬುದರ ಕಲ್ಪನೆ ಬಗ್ಗೆ ತಿಳುವಳಿಕೆ ಮೂಡಿಸಲು) ಪ್ರಬಂಧ ಸ್ಪರ್ದೆ, ಚರ್ಚಾ ಸ್ಪರ್ದೆ, ರಸಪ್ರಶ್ನೆ, ವಿಚಾರ ಘೋಷ್ಠಿ ಇತರೆ ಸ್ಪರ್ದೆಗಳನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸಿ ಅರಿವು ಮೂಡಿಸುವುದು. ಈ ಕುರಿತು ಶಿಕ್ಷಕರಿಗೆ ಅಗತ್ಯ ಮಾಹಿತಿ / ತರಬೇತಿ ನೀಡುವುದು.

*03.* ಶಾಲೆಗಳಲ್ಲಿ ಉತ್ತಮ ಕ್ರಿಯಾಶೀಲ ರಚನಾತ್ಮಕ ಚಟುವಟಿಕೆಗಳನ್ನು ಆಯೋಜಿಸುವುದರೊಂದಿಗೆ ಆಕರ್ಷಣೀಯ ಕೇಂದ್ರಗಳನ್ನಾಗಿಸುವುದು. ಇದರಿಂದಾಗಿ ವಿದ್ಯಾರ್ಥಿಗಳು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಮತ್ತು ದಾಖಲಾತಿ ಪ್ರಮಾಣ ಹೆಚ್ಚಾಗುವಂತೆ ಆರೋಗ್ಯಕರ ಸ್ಪರ್ಧಾ ಮನೋಭಾವದಿಂದ ಶಾಲಾ ಮುಖ್ಯಸ್ಥರುಗಳು ಶಾಲೆಗಳನ್ನು ನಿರ್ವಹಿಸಲು ಸೂಚಿಸಿದೆ.

*04.* **ಸೇತುಬಂಧ ಶಿಕ್ಷಣ:-** 2023-24 ನೇ ಸಾಲಿನ ವಾರ್ಷಿಕ ಕಾರ್ಯಸೂಚಿಯನ್ನು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗರಿಷ್ಠ ಕಲಿಕಾ ಅವಕಾಶದ ಸಮಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸೇತುಬಂಧ ಶಿಕ್ಷಣವನ್ನು 1-9 ನೇ ತರಗತಿಯವರೆಗೆ ಆಯೋಜಿಸಿದ್ದು, ಕ್ರಮವಾಗಿ 1-3 ನೇ ತರಗತಿಗಳಿಗೆ ದಿನಾಂಕ: 01.06.2023 ರಿಂದ 30.06.2023 ರವರೆಗೆ ಹಾಗೂ 4 ರಿಂದ 9ನೇ ತರಗತಿಗಳಿಗೆ ದಿನಾಂಕ:01.06.2023 ರಿಂದ ದಿನಾಂಕ: 15.06.2023ರ ವರೆಗೆ ನಿರ್ವಹಣೆಗೆ ಸೂಚಿಸಿದೆ. 10 ನೇ ತರಗತಿಗೆ ಪ್ರತಿ ವರ್ಷದಂತೆ ಶಾಲೆ ಪ್ರಾರಂಭದಿಂದ ನಿಗದಿತ ವೇಳಾ ಪಟ್ಟಿಯಂತೆ ಬೋಧನಾ ಕಲಿಕಾ ಚಟುವಟಿಕೆಗಳನ್ನು ನಿರ್ವಹಿಸುವುದು. ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಹಾಗೂ ಶಾಲಾ ಆಡಳಿತ ಮಂಡಳಿರವರುಗಳು ಹಾಗೂ ಉಸ್ತುವಾರಿ ಅಧಿಕಾರಿಗಳು & ಸಿಬ್ಬಂದಿಗಳು ಮಿಂಚಿನ ಸಂಚಾರ ಕೈಗೊಂಡು ಇದನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವುದು.

*05.* **ಶಾಲಾ ಹಂತದ ಚಟುವಟಿಕೆಗಳು:-** ಶಾಲೆಗಳಲ್ಲಿನ ವಿವಿಧ ಸಂಘಗಳ/ಕ್ಲಬ್‌ಗಳ ಅಡಿಯಲ್ಲಿ ಹಮ್ಮಿಕೊಳ್ಳುವಂತ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಕಲಿಕಾ ಅವಧಿಗೆ ಚ್ಯುತಿ ಬಾರದಂತೆ ಎಚ್ಚರಿಕೆಯಿಂದ ಅನುಷ್ಠಾನಗೊಳಿಸುವುದು ಹಾಗೂ ಕಾಲಕಾಲಕ್ಕೆ ಇಲಾಖೆಯಿಂದ ಹೊರಡಿಸಲಾಗುವ ಅನುಮತಿ / ಆದೇಶ / ಸುತ್ತೋಲೆ ಗಮನಿಸಿ ಮುಂದುವರೆಯುವುದು.

*06.* **ವಿವಿಧ ಆಚರಣೆಗಳು:-** 2023-24 ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಆಚರಿಸಬೇಕಾದ ದಿನಾಚರಣೆಗಳು ಸರ್ಕಾರಿ ರಜೆ/ಭಾನುವಾರಗಳಾದಲ್ಲಿ ಅಥವಾ ಆ ದಿನ ಅಧಿಕೃತವಾಗಿ ಸರ್ಕಾರದಿಂದ ರಜೆ ಘೋಷಣೆಯಾದಲ್ಲಿ ಅಂತಹ ಆಚರಣೆಗಳನ್ನು ನಂತರದ ದಿನಗಳಲ್ಲಿ ಶಾಲಾ ಮಕ್ಕಳಿಗೆ ಅಂತಹ ಆಚರಣೆಗಳ ಪ್ರಾಮುಖ್ಯತೆ ತಿಳಿಸುವುದರ ಮೂಲಕ ಆಚರಿಸುವುದು ಹಾಗೂ ನಿಗದಿಪಡಿಸಿದ ಪರೀಕ್ಷೆಗಳು / ಚಟುವಟಿಕೆಗಳು ಸರ್ಕಾರಿ ರಜೆ / ಭಾನುವಾರಗಳಾದಲ್ಲಿ ಮುಂದಿನ ಕರ್ತವ್ಯದ ದಿನಗಳಲ್ಲಿ ನಿರ್ವಹಿಸುವುದು. ಇಂತಹ ವಿವಿಧ ದಿನಾಚರಣೆಗಳ ಆಚರಣೆಯನ್ನು ಪ್ರಾರ್ಥನಾ ಸಮಯದಲ್ಲಿ ಅದರ ಮಹತ್ವವನ್ನು ತಿಳಿಸುವುದರೊಂದಿಗೆ ಸರಳವಾಗಿ ಆಚರಿಸುವುದು. ಅವಶ್ಯಕತೆ ಇದ್ದಲ್ಲಿ ಆಯಾ ವಿಷಯಗಳ ಬೋಧನಾ ಅವಧಿಯಲ್ಲಿ ಸಹ ಸಂಬಂಧ ಕಲ್ಪಿಸಿ ಹೆಚ್ಚಿನ ಮಾಹಿತಿ ತಿಳಿಸುವುದು ಹಾಗೂ ಇದಕ್ಕಾಗಿ ಇಡೀ ದಿನ ಬಳಸದಂತೆ ಎಚ್ಚರಿಕೆ ವಹಿಸುವುದು.

*07.* **ಮೌಲ್ಯಾಂಕನ ವಿಶ್ಲೇಷಣೆ:-**ರೂಪಣಾತ್ಮಕ ಮೌಲ್ಯಮಾಪನವನ್ನು ಆಯಾ ವಿಷಯ ಬೋಧನೆ ಅವಧಿಯಲ್ಲಿ ದಿನಕ್ಕೆರಡು(ಬೆಳಿಗ್ಗೆ/ಮಧ್ಯಾಹ್ನದ ಅವಧಿಯಲ್ಲಿ) ವಿಷಯದಂತೆ ನಿರ್ವಹಿಸಿ ದೈನಂದಿನ ಬೋಧನಾ ಕಾರ್ಯಗಳಿಗೆ ಹಿನ್ನಡೆಯಾಗದಂತೆ ಮುಂದುವರೆಸುವುದು. ಸಂಕಲನಾತ್ಮಕ ಮೌಲ್ಯಮಾಪನವನ್ನು ಮಾತ್ರ ನಿಗಧಿತ ದಿನಗಳಂದು ಕಡ್ಡಾಯವಾಗಿ ದಿನಕ್ಕೆ ಒಂದು ವಿಷಯದಂತೆ ನಡೆಸುವುದು. ಮೌಲ್ಯಮಾಪನ ದಿನಗಳ ಸಮರ್ಪಕ ನಿರ್ವಹಣೆ ಆಗುವಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

*08.* **ಶಿಕ್ಷಕರ ದಿನಾಚರಣೆ:-** ಶಿಕ್ಷಕರ ದಿನಾಚರಣೆಯನ್ನು ವಿವಿಧ ಹಂತಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ನಡೆಸುತ್ತಿರುವುದರಿಂದ ಕಲಿಕಾ ದಿನಗಳು ಕಡಿಮೆಯಾಗಿರುವುದನ್ನು ಗಮನಿಸಿದೆ. ಈ ಹಿನ್ನಲೆಯಲ್ಲಿ ಇದನ್ನು ಅದೇ ದಿನ ಅಂದರೆ ದಿನಾಂಕ: 05.09.2023 ರಂದು ಎಲ್ಲಾ ಹಂತಗಳಲ್ಲೂ (ಶಾಲೆಗಳಲ್ಲಿ ಬೆಳಿಗ್ಗೆ 8 ರಿಂದ 10 ಗಂಟೆ ಒಳಗೆ,ನಂತರ ತಾಲ್ಲೂಕು/ ಜಿಲ್ಲಾ/ ರಾಜ್ಯ ಹಂತಗಳಲ್ಲಿ) ಆಚರಿಸಲು ಸಂಬಂಧ ಪಟ್ಟವರು ಕ್ರಮವಹಿಸುವುದು.

*09.* **ಕಲಿಕಾ ಬಲವರ್ಧನೆ:-** ಸಿ.ಸಿ.ಇ ಚಟುವಟಿಕೆಗಳ ನಿರ್ವಹಣೆ ಮತ್ತು ಆಂತರಿಕ ಅಂಕ ದಾಖಲಿಸುವಿಕೆ(ಚಟುವಟಿಕೆ ಬ್ಯಾಂಕ್) ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೆಯ ಶನಿವಾರಗಳಂದು ಮಾತ್ರ ಸಿ.ಸಿ.ಇ ಚಟುವಟಿಕೆಗಳನ್ನು ಸಂಘಟಿಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿನ ಕಲಿಕೆ/ಪ್ರತಿಭಾ ಪ್ರದರ್ಶನಕ್ಕೆ (Talent Exposure) ಅವಕಾಶ ನೀಡಿ ಪ್ರೋತ್ಸಾಹಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ಕ್ರಿಯಾಶೀಲ ಕಲಿಕಾಸಕ್ತರನ್ನಾಗಿ ಮಾಡುವುದು.

*10.* ಈ ದಿನ ಯಾವುದೇ ಮನೆಗೆಲಸ / ಹೋಂ ವರ್ಕ್ ನೀಡದೇ ದೈನಂದಿನ ಬೋಧನಾ ಕಲಿಕಾ ಪ್ರಕ್ರಿಯೆಯಿಂದ ಹೊರತಾಗಿರಬೇಕು. ಈ ಚಟುವಟಿಕೆಗಳು ಮನರಂಜನಾ ಕಾರ್ಯಕ್ರಮಗಳಾಗದೆ ಸಂಪೂರ್ಣವಾಗಿ ಪಠ್ಯಾಧಾರಿತ "ಫಲಿತಾಂಶ ಮುಖಿ" ಚಟುವಟಿಕೆಗಳಾಗಿರತಕ್ಕದ್ದು. ಈ ಚಟುವಟಿಕೆಗಳನ್ನು ಸಿ.ಸಿ.ಇ ಅಡಿ ನಿರ್ವಹಿಸಿ ಮೌಲ್ಯಂಕನ ವಿಶ್ಲೇಷಣೆ ಮಾಡಿ ಅಂತರಿಕ ಅಂಕಗಳ (Internal Assesment) 1-9ನೇ ತರಗತಿ ಸಿ.ಸಿ.ಇ ಹಾಗೂ ಭಾಗ-ಬಿ ಪಠ್ಯೇತರ ಚಟುವಟಿಕೆಗಳಲ್ಲಿ ಗ್ರೇಡ್ ನೀಡುವುದು ಮತ್ತು 10ನೇ ತರಗತಿಗೆ ಶೇ. 20 ರಂತೆ ಅಂಕಗಳ ಮೌಲ್ಯಾಂಕನಕ್ಕೆ ಪರಿಗಣಿಸಬಹುದಾಗಿದೆ ಹಾಗೂ ವಿದ್ಯಾರ್ಥಿಗಳಿಗೆ ಪೂರ್ವಭಾವಿಯಾಗಿ ತಿಳಿಸುವುದರೊಂದಿಗೆ ಕುತೂಹಲದಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸಬಹುದಾಗಿದೆ / ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್‌ನ ಹೊರೆಯನ್ನು ಕಡಿತಗೊಳಿಸಬಹುದಾಗಿದೆ. (ಇದಕ್ಕಾಗಿ ಈ ಹಿಂದಿನ ವರ್ಷಗಳಲ್ಲಿ ನೀಡಿದ ವಿವಿಧ ಚಟುವಟಿಕೆಗಳ ನಿರ್ವಹಣೆಗೆ ಸುತ್ತೋಲೆಗಳನ್ನು, ಶೈಕ್ಷಣಿಕ ಮಾರ್ಗದರ್ಶಿ 2022-23 ಮತ್ತು ಅನುಬಂಧಿಸಿದ ಚಟುವಟಿಕೆಗಳ ಬ್ಯಾಂಕ್ ಅನ್ನು ವಿಶೇಷವಾಗಿ ಶೈಕ್ಷಣಿಕ ಮಾರ್ಗದರ್ಶಿ 2022-23 ನ್ನು ಗಮನಿಸಬಹುದಾಗಿದೆ)

*11.* **ಪುಸ್ತಕ ಪರಿಚಯ ಅವಧಿಗಳ ನಿರ್ವಹಣೆ :-** ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಶೈಕ್ಷಣಿಕ ವರ್ಷದ ಸೇತುಬಂಧ ಶಿಕ್ಷಣದ ಜೊತೆ ಪಾಠ ಬೋಧನೆಯ ಪ್ರಾರಂಭದಲ್ಲಿ ಅಂದರೆ 01.06.2023 ರಿಂದ 06.06.2023 ರವರೆಗೆ ತರಗತಿವಾರು / ವಿಷಯವಾರು ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಮುಖ್ಯಾಂಶಗಳನ್ನು ಪರಿಚಯಿಸುವುದರೊಂದಿಗೆ ಸಿ.ಸಿ.ಇ ಚಟುವಟಿಕೆಗಳನ್ನು ಮತ್ತು ವಿವಿಧ ಪರೀಕ್ಷಾ ವಿಧಗಳನ್ನು (ಉದಾ: ಎಸ್.ಎಸ್.ಎಲ್.ಸಿ ಯಲ್ಲಿ ಶೇ 80:20 ರ ಮಹತ್ವ, 1 ರಿಂದ 9 ನೇ ತರಗತಿಗಳಿಗೆ ಸಿ.ಸಿ.ಇ/ಭಾಗ-ಬಿ ಮೌಲ್ಯಂಕನ ಕುರಿತಂತೆ) ಹಾಗೂ ಮೌಲ್ಯಾಂಕನ ವಿಶ್ಲೇಷಣೆ ಕುರಿತು ವಾರ್ಷಿಕ ಪಾಠ ಹಂಚಿಕೆ ಯೋಜನೆಯನ್ನು ಪರಿಚಯಿಸುವುದರೊಂದಿಗೆ ವಿಷಯಾವಾರು ವರ್ಷದ ಸಮಗ್ರ ಚಿತ್ರಣ ನೀಡುವುದರೊಂದಿಗೆ ಆತ್ಮ ವಿಶ್ವಾಸ ಮೂಡಿಸುವುದು.

*12.* **ತರಗತಿವಾರು / ವಿಷಯವಾರು ವಾರ್ಷಿಕ ಯೋಜನೆ ತಯಾರಿಕೆ:-**ಶಾಲಾ ಹಂತದಲ್ಲಿ ಶಿಕ್ಷಕರು ತಮ್ಮ ತರಗತಿವಾರು ವಿಷಯ ಬೋಧನೆಯ ಕಳೆದ ಸಾಲಿನ ಮೌಲ್ಯಾಂಕನ ವಿಶ್ಲೇಷಣೆಯನ್ನಾಧರಿಸಿ ಕಲಿಕಾ ಹಿನ್ನಡೆಗೆ ಕಾರಣಗಳನ್ನು ಪಟ್ಟಿ ಮಾಡುವುದು. ಪ್ರಸ್ತುತ ಸಾಲಿನಲ್ಲಿ ಅವುಗಳ ಸಾಧನೆಗೆ ಪರಿಹಾರ ಕಂಡುಕೊಂಡು ತರಗತಿವಾರು ವಿಷಯಾವಾರು ಕ್ರಿಯಾಯೋಜನೆ ರೂಪಿಸಿ ಪರಿಣಾಮಕಾರಿ ಅನುಪಾಲನೆ ಮಾಡುವುದು.

*13.* **ರಾಷ್ಟ್ರೀಯ / ನಾಡ ಹಬ್ಬ:-**ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ, ಡಾ॥ಬಿ.ಆರ್. ಅಂಬೇಡ್ಕರ್ ಜಯಂತಿ, ನಾಡ ಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಮುಂತಾದವುಗಳನ್ನು ಆಯಾ ದಿನಗಳಂದು ಶಾಲೆಗಳಲ್ಲಿ ಕಡ್ಡಾಯವಾಗಿ ಆಚರಿಸುವುದು.

*14.* ಇಲಾಖೆಯ ವಿವಿಧ ಶೈಕ್ಷಣಿಕ ಆಡಳಿತಾತ್ಮಕ ಹಾಗೂ ಅಭಿವೃದ್ಧಿ ಪೂರಕ ಚಟುವಟಿಕೆಗಳ ನಿರ್ವಹಣೆಗೆ ವಿವಿಧ ಹಂತದ ಕ್ರಿಯಾ ಯೋಜನೆ ರೂಪಿಸಿ ಅನುಪಾಲನೆ ಮಾಡುವುದು.

*15.* **ಗುಣಾತ್ಮಕ ಕಲಿಕೆಗೆ ಸಂಪನ್ಮೂಲ ತಂಡ:-**ತಾಲ್ಲೂಕು/ಜಿಲ್ಲಾ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು (ಆಡಳಿತ/ಅಭಿವೃದ್ಧಿ) ರವರು ತಾಲ್ಲೂಕು ಸಂಪನ್ಮೂಲ ತಂಡ (ಬಿ.ಆರ್.ಜಿ) ಹಾಗೂ ಜಿಲ್ಲಾ ಸಂಪನ್ಮೂಲ ತಂಡ (ಡಿ.ಆರ್.ಜಿ)ಗಳನ್ನು ವಿಷಯಾವಾರು ತಲಾ ಇಬ್ಬರು (02) ಶಿಕ್ಷಕರಂತೆ ಗುರುತಿಸಿಟ್ಟುಕೊಂಡು ಫಲಿತಾಂಶಮುಖಿ ಚಟುವಟಿಕೆಗಳಿಗೆ (ಇಲಾಖಾ ಅಂತರ್ಜಾಲ ತಾಣದಲ್ಲಿ ಲಭ್ಯವಿರುವ ಶೈಕ್ಷಣಿಕ ಮಾರ್ಗದರ್ಶಿ 2022-23 ನ್ನು ಗಮನಿಸಿ) ನಿಯೋಜಿಸಿ ಕ್ಷೇತ್ರ ಮಟ್ಟದಲ್ಲಿ ಗುಣಾತ್ಮಕ ಕಲಿಕೆಗೆ ಪ್ರಯತ್ನಿಸುವುದು.

16. ಇಲಾಖೆಯಡಿ ಪ್ರತಿವರ್ಷ ವಿವಿಧ ಚಟುವಟಿಕೆಗಳನ್ನು ಸಂಘಟಿಸುವುದರೊಂದಿಗೆ ಬೊಧನಾ ಕಲಿಕಾ ಬಲವರ್ಧನೆಗೆ ಯೋಜಿಸಲಾಗುವುದು. ಅಂದರೆ, SSK/DSERT ವತಿಯಿಂದ ಶಿಕ್ಷಕರಿಗೆ ತರಬೇತಿಗಳು, FLN ವಿದ್ಯಾ ಪ್ರವೇಶ, ಸೇತುಬಂಧ ಶಿಕ್ಷಣ, ಸಮಾಲೋಚನಾ ಸಭೆಗಳು ಮತ್ತು ಇತರೆ ಚಟುವಟಿಕೆಗಳ ಕುರಿತಂತೆ ಮತ್ತು ಪಠ್ಯೇತರ ಚಟುವಟಿಕೆಗಳ ನಿರ್ವಹಣೆ ಕುರಿತಂತೆ ನಿರ್ದೇಶಕರು (ಮೈನಾರಿಟಿ), ಅಧಿಕಾರಿ, ಸಿಬ್ಬಂದಿ ಹಾಗೂ ಶಿಕ್ಷಕರ ಸೇವೆಗಳು ಹಾಗೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಆಯುಕ್ತಾಲಯಗಳು, ಶಿಕ್ಷಕರ ಆಂಗ್ಲ ಬೋಧನಾ ಸಾಮರ್ಥ್ಯ / ನಾಯಕತ್ವ ತರಬೇತಿ ಬಲವರ್ಧನೆಗಾಗಿ RIE/SISLEP ನಿರ್ದೇಶನಾಲಯಗಳು, ಇಲಾಖಾ ಪ್ರೋತ್ಸಾಹದಾಯಕ ಯೋಜನೆಗಳಾದ ಮಧ್ಯಾಹ್ನ ಉಪಹಾರ ಯೋಜನೆ, ಪಠ್ಯ ಪುಸ್ತಕ ವಿತರಣೆ ಕುರಿತಂತೆ ಪ್ರಧಾನ ಮಂತ್ರಿ ಪೋಷಣ ಶಕ್ತಿ ಅಭಿಯಾನ (ಮಧ್ಯಾಹ್ನ ಉಪಹಾರ ಯೋಜನೆ) ಹಾಗೂ ಪಠ್ಯಪುಸ್ತಕ ಮಂಡಳಿ ನಿರ್ದೇಶನಾಲಯಗಳು, ಪರೀಕ್ಷೆಗಳು/ಮೌಲ್ಯಾಂಕನ ಕುರಿತಂತೆ KSEAB ಮಂಡಳಿ, ಹೀಗೆ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ನಿರ್ವಹಿಸುವ ಚಟುವಟಿಕೆಗಳ ಕುರಿತಂತೆ ವಾರ್ಷಿಕ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದಂತೆ ವಿವರವಾದ ಸುತ್ತೋಲೆಗಳನ್ನು ಪ್ರತ್ಯೇಕವಾಗಿ ಆಯಾ ನಿರ್ದೇಶನಾಲಯಗಳಿಂದ ಕಾಲಕಾಲಕ್ಕೆ ಹೊರಡಿಸುವುದರೊಂದಿಗೆ ಮಾರ್ಗದರ್ಶನ ನೀಡಲಾಗುವುದು.

***ವಿಶೇಷ ಸೂಚನೆ- ಕೆಲವು ಅನಿರೀಕ್ಷಿತ ಸಂದರ್ಭದಲ್ಲಿ ಕಾಲಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಬದಲಾವಣೆಗಳ ಷರತ್ತಿಗೊಳಪಟ್ಟು ಸದರಿ ವಾರ್ಷಿಕ ಕಾರ್ಯ ಸೂಚಿ ಸಿದ್ಧಪಡಿಸಿದ್ದು ಅದರಂತೆ ಅನುಷ್ಠಾನಗೊಳಿಸಲು ಸೂಚಿಸಿದೆ.***

**ಹೆಚ್ಚಿನ ಮಾಹಿತಿಗಾಗಿ ಕೆಳಕಂಡಂತೆ ಅನುಬಂಧಗಳನ್ನು ಲಗತ್ತಿಸಿದೆ.**

1. ಅನುಬಂಧ-01 :- ತರಗತಿವಾರು / ವಿಷಯವಾರು, ಅಧ್ಯಾಯವಾರು ಅಗತ್ಯ ಬೋಧನಾವಧಿಗಳ ವಾರ್ಷಿಕ ಪಾಠ ಹಂಚಿಕೆ ಕ್ರಿಯಾ ಯೋಜನೆ.
2. ಅನುಬಂಧ-02 :- ಕಲಿಕಾ ಬಲವರ್ಧನೆ ಸಿ.ಸಿ.ಇ. ಚಟುವಟಿಕೆಗಳ ನಿರ್ವಹಣೆಗಾಗಿ ಚಟುವಟಿಕೆ ಬ್ಯಾಂಕ್.
3. ಅನುಬಂಧ-03 :- ತರಗತಿವಾರು / ವಿಷಯವಾರು ಬೋಧನಾ ಅವಧಿಗಳು ಮತ್ತು ಅಗತ್ಯ ಶಾಲಾ ಕರ್ತವ್ಯದ ದಿನಗಳು.
4. ಅನುಬಂಧ-04 :- ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ನಿಗಧಿಪಡಿಸಿರುವ ಶಾಲಾ ಶುಲ್ಕಗಳ ವಿವರ.

(ಆಯುಕ್ತರ ಆದೇಶಾನುಸಾರ)

ನಿರ್ದೇಶಕರು(ಪ್ರೌಢ ಶಿಕ್ಷಣ)

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

*ಇವರಿಗೆ:*

01. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಆಯಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ), ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.
03. ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರಿಗೆ (ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ) ಮುಂದಿನ ಕ್ರಮಕ್ಕಾಗಿ,

***ಪ್ರತಿಯನ್ನು:***

01. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
02. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
03. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ

04. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.

05. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ

06. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.

07. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

08. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 80 ಅಡಿ ಹೊರ ವರ್ತುಲ ರಸ್ತೆ, ಬನಶಂಕರಿ, ಬೆಂಗಳೂರು ಇವರಿಗೆ ರವಾನಿಸುತ್ತಾ ಸೂಕ್ತ ಯೋಜನೆ ರೂಪಿಸಿ ಜಿಲ್ಲೆಗಳಿಗೆ ಮಾರ್ಗದರ್ಶನ ಮಾಡಲು ತಿಳಿಸಿದೆ.

09. ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂಘ(ನೋಂ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.

10. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕಕರುಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.

11. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

12. ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.

13. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ಸಾ.ಇ.ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಇಲಾಖಾ ಅಂತರ್ಜಾಲ ತಾಣದಲ್ಲಿ ಅಳವಡಿಸಲು ತಿಳಿಸಿದೆ.

14. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಶಿಕ್ಷಣ ವಾರ್ತೆ ಏಪ್ರಿಲ್/ಮೇ ಸಂಚಿಕೆಯಲ್ಲಿ ಪ್ರಕಟಿಸಲು ತಿಳಿಸಿದೆ

15. ಕಛೇರಿ ಪ್ರತಿ.

ಅನುಬಂಧ-02

**' ಕಲಿಕಾ ಬಲವರ್ಧನೆಗೆ ಚಟುವಟಿಕೆ ಬ್ಯಾಂಕ್ '**

***(ಪರಿಪೂರ್ಣವಾಗಿ ಪಠ್ಯವಸ್ತು ಆಧಾರಿತ ಫಲಿತಾಂಶ ಮುಖಿ ಕಾರ್ಯಕ್ರಮಗಳಾಗಿದ್ದು ಶಾಲಾ ಹಂತದಲ್ಲಿ ಪ್ರತಿ ಶನಿವಾರದಂದು ಅಥವಾ ಪ್ರತಿ ತಿಂಗಳ 2 ನೇ ಮತ್ತು 4 ನೇ ಶನಿವಾರಗಳಂದು ಸಂಘಟಿಸುವುದರೊಂದಿಗೆ ಕಲಿಕಾ ಪ್ರಗತಿಯನ್ನು ತಿಳಿಯಬಹುದಾಗಿದೆ).***

| ಕ್ರ. ಸಂ. | ಮಾಹೆವಾರು | ಚಟುವಟಿಕೆಗಳ ವಿವರ |
|---|---|---|
| 01. | ಜೂನ್-2023 | ಕಲಿಕೆಗೆ ಪ್ರೇರಕಗಳು / ಹಿನ್ನಡೆಗಳಿಗೆ ಕಾರಣವಾಗುವ ಸಂವಾದ ಕಾರ್ಯಕ್ರಮ. |
| 02. | ಜುಲೈ-2023 | ಅನಿರೀಕ್ಷಿತ ಪರೀಕ್ಷೆ, ಪ್ರಾತ್ಯಕ್ಷಿಕೆ, ಸಮಗ್ರ ರಸಪ್ರಶ್ನೆ ಕಾರ್ಯಕ್ರಮ (ಕಲಿಕಾಂಶಗಳ ಪುನರಾವರ್ತನೆಯಂತೆ ಎಲ್ಲಾ ವಿಷಯಗಳಿಗೆ ಪ್ರತಿ ತಿಂಗಳು 2 ಮತ್ತು 4 ನೇ ಶನಿವಾರಗಳಂದು ಆಯೋಜಿಸುವುದು). |
| 03. | ಆಗಸ್ಟ್-2023 | ವಿಚಾರ ಸಂಕಿರಣ, ಮಕ್ಕಳ ಸಾಹಿತ್ಯ ಸಮ್ಮೇಳನ, ಮಕ್ಕಳ ಕವಿಗೋಷ್ಟಿ. |
| 04. | ಸೆಪ್ಟೆಂಬರ್-2023 | ಚರ್ಚಾ ಸ್ಪರ್ಧೆ, ಮಕ್ಕಳ ಸಂಸತ್ತು, ಪ್ರಬಂಧ ಸ್ಪರ್ಧೆ, ಪಾಸಿಂಗ್ ದಿ ಪಾರ್ಸೆಲ್. |
| 05. | ಅಕ್ಟೋಬರ್-2023 | " ಗ್ರಂಥಾಲಯ / ಪ್ರಯೋಗಾಲಯದಲ್ಲಿ ಒಂದು ದಿನ " ಕಾರ್ಯಕ್ರಮ, ಚಿತ್ರಕಲೆ ಸ್ಪರ್ಧೆ. |
| 06. | ನವೆಂಬರ್-2023 | ಮಕ್ಕಳ ಸಂತೆ / ಮಕ್ಕಳ ಮೇಳ, ಮಕ್ಕಳ ಹಬ್ಬ, ಗುಂಪು ಅಧ್ಯಯನ ಮತ್ತು ವಿಶ್ಲೇಷಣೆ, ಸಂವಾದ / ಹರಟೆ. |
| 07. | ಡಿಸೆಂಬರ್-2023 | ಮಕ್ಕಳಿಂದ ಪ್ರಶ್ನೆಪತ್ರಿಕೆ ತಯಾರಿಕೆ ಮೌಲ್ಯಮಾಪನ ಮತ್ತು ವಿಶ್ಲೇಷಣೆ, ತೆರೆದ ಪುಸ್ತಕ ಪರೀಕ್ಷೆ, ವಿಷಯವಾರು ವಸ್ತು ಪ್ರದರ್ಶನ. |
| 08. | ಜನವರಿ-2024 | ಕಲಿಕೋತ್ಸವ, ಪ್ರಾಜೆಕ್ಟ್ ವರ್ಕ್‌ಗಳ ಪ್ರದರ್ಶನ ಮತ್ತು ವಿಶ್ಲೇಷಣೆ, ಗುಂಪುಗಳ ಕಲಿಕಾ ಪ್ರಗತಿ ಪರಿಶೀಲನೆ. |
| 09. | ಫೆಬ್ರವರಿ-2024 | ಸ್ಪೋಕನ್ ಇಂಗ್ಲೀಷ್ ನಿರ್ವಹಣೆ, ಪವಾಡ ಗುಟ್ಟು ಬಯಲು / ವಿಜ್ಞಾನ ರಂಗೋಲಿ, ಕಂಠಪಾಠ ಸ್ಪರ್ಧೆ. |

**ವಿಶೇಷ ಸೂಚನೆ:-**

- **ಮೇಲ್ಕಂಡ ಸದರಿ ಕಾರ್ಯಕ್ರಮಗಳು ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸಿ.ಸಿ.ಇ ಅಡಿ ನಿರ್ವಹಿಸಬಹುದಾದ ಶೈಕ್ಷಣಿಕ ಚಟುವಟಿಕೆಗಳಾಗಿದ್ದು, ಕನಿಷ್ಟ ಪ್ರತಿ ತಿಂಗಳಿಗೆ ಒಂದನ್ನಾದರೂ ಆಯ್ಕೆ ಮಾಡಿ ಸ್ಪರ್ಧಾತ್ಮಕವಾಗಿ ಆಯೋಜಿಸಿ, ಮೌಲ್ಯಾಂಕನ ಮಾಡಿ (ಸಿ.ಸಿ.ಇ) ಆಂತರಿಕ ಮೌಲ್ಯಾಂಕನಕ್ಕೆ (Internal asessment) ಪರಿಗಣಿಸಿ ಗ್ರೇಡ್ / ಅಂಕಗಳನ್ನು ದಾಖಲಿಸಬಹುದಾಗಿದೆ.**
- **ಈ ಮೇಲ್ಕಂಡ ಚಟುವಟಿಕೆಗಳನ್ನು ತರಗತಿವಾರು / ವಿಷಯವಾರು ಅಗತ್ಯಕ್ಕೆ ಅನುಸಾರವಾಗಿ ಆಯಾ ತಿಂಗಳ ಬೋಧನಾಂಶಗಳು ಪುನರಾವರ್ತನೆಯಾಗುವಂತೆ ಮಾನದಂಡಗಳನ್ನು ರೂಪಿಸಿ ಸಂಘಟಿಸುವುದು.**
- **ಪ್ರತಿ ತಿಂಗಳಿಗೆ ಕನಿಷ್ಟ ಒಂದು ಸಿ.ಸಿ.ಇ ಚಟುವಟಿಕೆ ಅಡಿ ಆಯೋಜಿಸಿ ವಿದ್ಯಾರ್ಥಿಗಳಿಗೆ ಬೋಧನಾ ಕಲಿಕಾ ಪ್ರಕ್ರಿಯೆ ಕೇವಲ ತರಗತಿ ಕೋಣೆಗೆ ಸೀಮಿತಗೊಳ್ಳದೇ ಚಟುವಟಿಕೆ ಮುಖೇನ ಕಲಿಕೆಯನ್ನು ಬಲವರ್ಧನೆಗೊಳಿಸಬಹುದು ಎಂಬುದನ್ನು ಸಾಕ್ಷೀಕರಿಸಬಹುದು. ಇದಕ್ಕಾಗಿ ವಿಭಿನ್ನವಾಗಿ ಮತ್ತು ರಚನಾತ್ಮಕವಾಗಿ ಸಂಘಟಿಸಿ ವಿಶೇಷವಾದ ಕಲಿಕಾ ವಾತಾವರಣವನ್ನು ಸೃಜಿಸಿ ವಿದ್ಯಾರ್ಥಿಗಳಿಗೆ ಶಾಲೆಯನ್ನು ಆಕರ್ಷಣೀಯ ಕೇಂದ್ರವಾಗಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ.**